ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು
JSS MAHAVIDYAPEETHA, MYSURU

# ಜೆಎಸ್‌ಎಸ್ ವಾರ್ತಾಪತ್ರ

ಮಾಸಪತ್ರಿಕೆ

# JSS VARTHAPATHRA

Monthly Magazine

ಸಂಪುಟ 11 ಸಂಚಿಕೆ 4 ಏಪ್ರಿಲ್ 2026



ಮೈಸೂರಿನ ಶ್ರೀ ಸುತ್ತೂರು ಮಠಕ್ಕೆ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರಾದ ಗೌ.ನ್ಯಾ. ಶ್ರೀ ವಿ. ರಾಮಸುಬ್ರಮಣಿಯನ್‌ರವರು ಧರ್ಮಪತ್ನಿ ಸಮೇತರಾಗಿ ಭೇಟಿ ನೀಡಿದ ಸಂದರ್ಭದಲ್ಲಿ ಪರಮಪೂಜ್ಯ ಜಗದ್ಗುರುಗಳವರು ಅವರನ್ನು ಸನ್ಮಾನಿಸಿ ಗೌರವಿಸಿದರು (14 ಮಾರ್ಚ್ 2026)




ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಕ್ಯಾತ್‌ಲ್ಯಾಬ್, ಅತ್ಯಾಧುನಿಕ ಎಐ ಆಧಾರಿತ ಸಿಟಿ ಸ್ಕ್ಯಾನರ್, ಉನ್ನತೀಕರಿಸಿದ ಎಂಆರ್‌ಐ, ನರಶಸ್ತ್ರಚಿಕಿತ್ಸಾ ಸೂಕ್ಷ್ಮದರ್ಶಕಯಂತ್ರ ಹಾಗೂ ತಾಯಿ ಎದೆಹಾಲಿನ ಬ್ಯಾಂಕ್‌ಗಳ ಉದ್ಘಾಟನೆಯು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿತು. ಡಾ. ಸಿ.ಪಿ. ಮಧು, ಡಾ. ಬಿ. ಸುರೇಶ್, ಶ್ರೀಮತಿ ನಾಗಲಕ್ಷ್ಮೀ ಚೌಧರಿ, ಸಚಿವರಾದ ಡಾ. ಶರಣಪ್ರಕಾಶ್ ಆರ್. ಪಾಟೀಲ್, ಶ್ರೀ ಪಿ.ಎಂ. ನರೇಂದ್ರಸ್ವಾಮಿ, ಶ್ರೀ ಟಿ.ಎಸ್. ಶ್ರೀವತ್ಸ, ಪ್ರೊ. ಎಸ್.ಪಿ. ಮಂಜುನಾಥ್ ಮತ್ತು ಡಾ. ಹೆಚ್. ಬಸವನಗೌಡಪ್ಪನವರುಗಳಿದ್ದಾರೆ. (29 ಮಾರ್ಚ್ 2026)




ಸುತ್ತೂರು ಶ್ರೀಕ್ಷೇತ್ರದಲ್ಲಿ ಯುಗಾದಿ, ಅಲ್ಲಮಪ್ರಭು ಜಯಂತಿ ಹಾಗೂ ಪಂಚಾಂಗ ಪಠಣ ಕಾರ್ಯಕ್ರಮಗಳು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಜರುಗಿದವು. ಪಂಚಾಂಗಕರ್ತರಾದ ಸಿದ್ಧಾಂತಿ ಡಾ. ಕೆ.ಜಿ. ಪುಟ್ಟಹೊನ್ನಯ್ಯನವರು ಪಂಚಾಂಗ ಪಠಣ ಮಾಡಿದರು. ಡಾ. ಜಿ.ವಿ. ಮಂಜುನಾಥ್‌ರವರು, ಡಾ. ವೂಡೇ ಪಿ. ಕೃಷ್ಣರವರು ಹಾಗೂ ಮಠಾಧೀಶರುಗಳಿದ್ದಾರೆ. (19 ಮಾರ್ಚ್ 2026)

## ಸುತ್ತೂರು ಶ್ರೀಕ್ಷೇತ್ರದಲ್ಲಿ ಯುಗಾದಿ, ಅಲ್ಲಮಪ್ರಭು ಜಯಂತಿ ಹಾಗೂ ಪಂಚಾಂಗ ಪಠಣ

ಸುತ್ತೂರು ಶ್ರೀಕ್ಷೇತ್ರದಲ್ಲಿ ಮಾರ್ಚ್ 19ರಂದು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಯುಗಾದಿ, ಅಲ್ಲಮಪ್ರಭು ಜಯಂತಿ ಹಾಗೂ ಪಂಚಾಂಗ ಪಠಣ ಕಾರ್ಯಕ್ರಮಗಳು ಜರುಗಿದವು. ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃಗದ್ದುಗೆಯಲ್ಲಿ ಮಹಾರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ, ಮಹಾಮಂಗಳಾರತಿ ಹಾಗೂ ಪ್ರಾಕಾರೋತ್ಸವಗಳು ನೆರವೇರಿದವು. ಶ್ರೀ ಮಹದೇಶ್ವರ ಸನ್ನಿಧಿ, ಶ್ರೀ ಸೋಮೇಶ್ವರ, ಶ್ರೀ ವೀರಭದ್ರೇಶ್ವರ, ಶ್ರೀ ನಂಜುಂಡೇಶ್ವರ ಮತ್ತು ಶ್ರೀ ನಾರಾಯಣಸ್ವಾಮಿ ದೇವಸ್ಥಾನಗಳಲ್ಲಿಯೂ ವಿಶೇಷ ಪೂಜೆ ನಡೆದವು.

ಹೊಳಲ್ಕೆರೆ ಕೊಟ್ರೆ ನಂಜಪ್ಪ ಪದವಿಪೂರ್ವ ಕಾಲೇಜಿನ ಉಪನ್ಯಾಸಕರಾದ ಡಾ. ಜಿ.ವಿ. ಮಂಜುನಾಥ್‌ರವರು 'ಅಲ್ಲಮಪ್ರಭು ಜೀವನ ಮತ್ತು ವಚನ ವೈಭವ' ವಿಷಯ ಕುರಿತು ಉಪನ್ಯಾಸ ನೀಡಿ, ಅಲ್ಲಮಪ್ರಭುಗಳ ವಚನಗಳು ಬಹಳ ಶ್ರೇಷ್ಠವಾಗಿವೆ. ಸುಮಾರು 1650ಕ್ಕೂ ಹೆಚ್ಚು ವಚನಗಳನ್ನು ರಚಿಸಿದ್ದಾರೆ. ಧಾರ್ಮಿಕ, ಆಧ್ಯಾತ್ಮಿಕ ಚಿಂತಕರಾದ ಅಲ್ಲಮಪ್ರಭುಗಳು ಮನುಷ್ಯನ ಜೀವನ ಸಾರ್ಥಕವಾಗಬೇಕಾದರೆ ಪಂಚೇಂದ್ರಿಯಗಳನ್ನು ನಿಗ್ರಹಿಸಿಕೊಂಡು, ಸುಜ್ಞಾನವನ್ನು ಬೆಳೆಸಿ, ಕೆಟ್ಟ ಗುಣಗಳಿಂದ ದೂರವಿದ್ದು ಮನಸ್ಸನ್ನು ಜಾಗೃತಗೊಳಿಸಿ ಜೀವನ ಸಾರ್ಥಕವಾಗುತ್ತದೆ ಎಂದಿದ್ದಾರೆ. ಇವರ ವಚನಗಳು ಬೆಡಗಿನ ವಚನಗಳಾಗಿದ್ದು, ಅಂತಃಕರಣದ ಮನಸ್ಸನ್ನು ತೆರೆಸುತ್ತವೆ. ಮನುಷ್ಯನು ಅತಿಯಾಸೆಯನ್ನು ಬಿಡಬೇಕು. ಹಣ, ಆಸ್ತಿ, ಅಂತಸ್ತು, ಅಧಿಕಾರಕ್ಕಾಗಿ ಹಾತೊರೆಯಬಾರದು. ಅವುಗಳು ತಾವಾಗಿಯೇ ಒಲಿಯುವಂತೆ ಮಾಡಬೇಕು. 12ನೇ ಶತಮಾನದಲ್ಲಿ ಬಸವಣ್ಣನವರು ಮತ್ತು ಅಲ್ಲಮಪ್ರಭುಗಳು ಮೇರು ವ್ಯಕ್ತಿತ್ವದ ದಿಗ್ಗಜರಾಗಿದ್ದಾರೆ. ಅಲ್ಲಮಪ್ರಭುಗಳಿಗೆ ಅಲ್ಲಮಪ್ರಭುಗಳೇ ಸರಿಸಾಟಿಯೆಂದು ಹೇಳಬಹುದು. ಒಂದು ತಕ್ಕಡಿಯಲ್ಲಿ ಶರಣರ ವಚನಗಳನ್ನು ಮತ್ತೊಂದು ತಕ್ಕಡಿಯಲ್ಲಿ ಅಲ್ಲಮಪ್ರಭುಗಳ ವಚನಗಳನ್ನು ತೂಕ ಹಾಕಿದರೆ, ಅಲ್ಲಮಪ್ರಭುಗಳ ವಚನಗಳೇ ಉತ್ಕೃಷ್ಟವಾಗಿರುತ್ತವೆ ಎಂದು ತಿಳಿಸಿದರು.

ಮೈಸೂರಿನ ಭಾರತೀಯ ಜ್ಯೋತಿರ್ವಿಜ್ಞಾನ ಸಂಶೋಧನಾ ಕೇಂದ್ರದ ಅಧ್ಯಕ್ಷರು ಹಾಗೂ ಪಂಚಾಂಗಕರ್ತರಾದ ಸಿದ್ಧಾಂತಿ ಡಾ. ಕೆ.ಜಿ. ಪುಟ್ಟಹೊನ್ನಯ್ಯನವರು ಪಂಚಾಂಗ ಪಠಣ ಮಾಡಿ, ಪಂಚಾಂಗವೆಂದರೆ ಐದು ಅಂಗಗಳಿಂದ ರಚಿತವಾಗಿರುತ್ತದೆ. ಪಂಚಾಂಗವನ್ನು ಖಗೋಳಶಾಸ್ತ್ರ ಹಾಗೂ ಗಣಿತ ಲೆಕ್ಕಾಚಾರದ ಆಧಾರದಲ್ಲಿ ರಚಿಸಲಾಗಿರುತ್ತದೆ. ಒಟ್ಟು 60 ಸಂವತ್ಸರಗಳ ಮಾಲಿಕೆಯಲ್ಲಿ ಈ ವರ್ಷ ಪರಾಭವ ನಾಮ ಸಂವತ್ಸರ ಬಂದಿದ್ದು, ದುಷ್ಟ ಶಕ್ತಿಗಳಿಗೆ ಸೋಲನ್ನು ಉಂಟು ಮಾಡುವ ಸಂವತ್ಸರವಾಗಿದೆ. ಶ್ರಾವಣ, ಕಾರ್ತಿಕ, ಆಶ್ವಯುಜ ಮಾಸಗಳು ಶ್ರೇಷ್ಠವಾಗಿವೆ. ಈ ವರ್ಷ ಅಧಿಕ ಮಾಸಗಳೂ ಇವೆ. ಈ ವರ್ಷವೂ 11 ದಿನಗಳು ವಿಜಯದಶಮಿಯನ್ನು ಆಚರಿಸಲಾಗುತ್ತದೆ. ಚೈತ್ರ ಮಾಸದಲ್ಲಿ ವಿವಾಹ ಮಾಡುವುದು ಶುಭವಾಗಿರುತ್ತದೆ. ಸುಭಿಕ್ಷೆಯಿಂದ ಮಳೆಯಾಗಿ ಕೆರೆಕಟ್ಟೆಗಳು ತುಂಬುತ್ತವೆ. ಸೂರ್ಯ ಗ್ರಹಣಗಳು ನಡೆಯುತ್ತವೆ. ಪಿತೃಪಕ್ಷಗಳಲ್ಲೂ ಕೂಡ ಶುಭ ಕಾರ್ಯಗಳನ್ನು ಮಾಡಬಹುದು. ಉತ್ತಮ ಬೆಳೆಗಳಾಗುತ್ತವೆ. ಗಂಗಾನದಿಯಲ್ಲಿ ಸ್ನಾನ ಮಾಡಿದರೆ ಪಾಪ ಕಳೆಯುತ್ತದೆ ಎಂದು ತಿಳಿಸಿದರು.

ನಂತರ ನಡೆದ ಪ್ರಶ್ನೋತ್ತರ ಸಂದರ್ಭದಲ್ಲಿ ಬೆಂಗಳೂರು ಶೇಷಾದ್ರಿಪುರಂ ಸಂಸ್ಥೆಗಳ ಕಾರ್ಯದರ್ಶಿಗಳು ಹಾಗೂ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರೂ ಆದ ಡಾ. ಶ್ರೀ ವೂಡೇ ಪಿ. ಕೃಷ್ಣರವರು ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧವು ಯಾವಾಗ ಕೊನೆಗೊಳ್ಳಬಹುದು ಎಂದು ಕೇಳಿದ ಪ್ರಶ್ನೆಗೆ, ಪ್ರಪಂಚದಲ್ಲಿ ನಡೆಯುತ್ತಿರುವ ಯುದ್ಧವು ಸದ್ಯದಲ್ಲಿಯೇ ಅಂತ್ಯಗೊಳ್ಳಲಿದೆ. ಯಾರು ಅಹಂಕಾರದಿಂದ ಮೆರೆಯುತ್ತಿದ್ದಾರೋ ಅವರಿಗೆ ತಕ್ಕ ಶಾಸ್ತಿಯೂ ಆಗುತ್ತದೆ ಎಂದು ಶ್ರೀ ಪುಟ್ಟಹೊನ್ನನವರು ತಿಳಿಸಿದರು.

ಶ್ರೀಮಠ ಹಾಗೂ ಗ್ರಾಮದ ಹೊನ್ನೇರುಗಳನ್ನು ಶ್ರೀಮಠದಿಂದ ಮಂಗಳವಾದ್ಯ ಹಾಗೂ ವಿವಿಧ ಜನಪದ ಕಲಾ ತಂಡಗಳೊಂದಿಗೆ ಮೆರವಣಿಗೆಯಲ್ಲಿ ಜಮೀನುಗಳಿಗೆ ತೆಗೆದುಕೊಂಡು ಹೋಗಿ ಭೂಮಿತಾಯಿಗೆ ಪೂಜೆ ಸಲ್ಲಿಸಿ ಹೊಸ ವರ್ಷದ ಕೃಷಿ ಕಾಯಕಕ್ಕೆ ಚಾಲನೆ ನೀಡಲಾಯಿತು.

ಕುರುಬೂರು, ಕುದೇರು, ಬರಗೂರು, ಮಡಿವಾಳಸ್ವಾಮಿ ಮಠ, ದಂಡಿಕೆರೆ, ಕುಂದೂರು ಬೆಟ್ಟ, ನಂಜನಗೂಡು, ರಾಮಾಪುರ, ಚುಂಚನಹಳ್ಳಿ, ಆಲಮಟ್ಟಿ ಮೊದಲಾದ ಮಠಗಳ ಶ್ರೀಗಳು, ಶ್ರೀ ಶಂಕರ್ ದೇವನೂರು, ಗಣ್ಯರು ಹಾಗೂ ಸುತ್ತಮುತ್ತಲ ಗ್ರಾಮಗಳ ಸಹಸ್ರಾರು ಭಕ್ತಾದಿಗಳು ಭಾಗವಹಿಸಿದ್ದರು. ಶಾಲಾ ಮಕ್ಕಳು ಪ್ರಾರ್ಥಿಸಿದರು. ಶ್ರೀ ಜಿ. ಶಿವಸ್ವಾಮಿ ಸ್ವಾಗತಿಸಿದರು. ಶ್ರೀ ಅಂದಯ್ಯ ಶಿರೂರಮಠ ನಿರೂಪಿಸಿ, ವಂದಿಸಿದರು. □

## ಗಾಂಧಿ ಶಿಲ್ಪ ಬಜಾರ್



ಮೈಸೂರಿನ ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ ನಡೆದ 152ನೇ ಕರಕುಶಲ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ಮೇಳವನ್ನು ಮೈಸೂರಿನ ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆಯ ನಿರ್ದೇಶಕರಾದ ಡಾ. ಪಿ. ದೀಪಾರವರು ಉದ್ಘಾಟಿಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಡಾ. ಎಂ.ಡಿ. ಸುದರ್ಶನ್, ಭಾರತ ಸರ್ಕಾರದ ಕರಕುಶಲ ಸೇವಾ ಕೇಂದ್ರದ ಮೈಸೂರು ಘಟಕದ ಸಹಾಯಕ ನಿರ್ದೇಶಕರಾದ ಶ್ರೀ ಎಸ್. ವಿನೋದ್ ಕುಮಾರ್‌ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. (6 ಮಾರ್ಚ್ 2026)

# ಉತ್ತಮ ಸಮಾಜ ಕಟ್ಟುವ ಕಾಯಕದಲ್ಲಿ ಸುತ್ತೂರು ಶ್ರೀಮಠಕ್ಕೆ ಅಗ್ರಸ್ಥಾನ




ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಕ್ಯಾತ್‌ಲ್ಯಾಬ್, ಅತ್ಯಾಧುನಿಕ ಎಐ ಆಧಾರಿತ ಸಿಟಿ ಸ್ಕ್ಯಾನರ್, ಉನ್ನತೀಕರಿಸಿದ ಎಂಆರ್‌ಐ, ನರಶಸ್ತ್ರಚಿಕಿತ್ಸಾ ಸೂಕ್ಷ್ಮದರ್ಶಕಯಂತ್ರ ಹಾಗೂ ತಾಯಿ ಎದೆಹಾಲಿನ ಬ್ಯಾಂಕ್‌ಗಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಡಾ. ಶರಣಪ್ರಕಾಶ್ ಆರ್. ಪಾಟೀಲ್‌ರವರು ಮಾತನಾಡುತ್ತಿರುವುದು. (29 ಮಾರ್ಚ್ 2026)

ಸಾವಿರಾರು ವರ್ಷಗಳಿಂದ ಮಠ-ಮಾನ್ಯಗಳು ಆಧ್ಯಾತ್ಮದ ತಳಹದಿಯ ಮೇಲೆ ಸಮಾಜ ಕಟ್ಟುವ ಕೆಲಸವನ್ನು ಮಾಡುತ್ತಿದ್ದು, ಸುತ್ತೂರು ಶ್ರೀಮಠ ಅಗ್ರಮಾನ್ಯ ಸ್ಥಾನವನ್ನು ಹೊಂದಿದೆ ಎಂದು ವೈದ್ಯಕೀಯ ಶಿಕ್ಷಣ ಇಲಾಖೆ ಸಚಿವರಾದ ಡಾ. ಶರಣಪ್ರಕಾಶ ಆರ್. ಪಾಟೀಲರವರು ಹೇಳಿದರು.

ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ದಿನಾಂಕ 29.3.2026ರಂದು ನಡೆದ ಕ್ಯಾತ್‌ಲ್ಯಾಬ್, ಅತ್ಯಾಧುನಿಕ ಎಐ ಆಧಾರಿತ ಸಿಟಿ ಸ್ಕ್ಯಾನರ್, ಉನ್ನತೀಕರಿಸಿದ ಎಂಆರ್‌ಐ, ನರಶಸ್ತ್ರಚಿಕಿತ್ಸಾ ಸೂಕ್ಷ್ಮದರ್ಶಕಯಂತ್ರ ಹಾಗೂ ತಾಯಿ ಎದೆಹಾಲಿನ ಬ್ಯಾಂಕ್‌ಗಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡುತ್ತಾ ತಿಳಿಸಿದರು. ರಾಜ್ಯದಲ್ಲಿ ಸರ್ಕಾರಿ ಸೇವೆಯೂ ತಲುಪದ ಜಾಗಗಳಲ್ಲಿ ಖಾಸಗಿ ಸಂಸ್ಥೆಯವರು ವೈದ್ಯಕೀಯ ಕಾಲೇಜು ಆಸ್ಪತ್ರೆಗಳನ್ನು ತೆರೆದು ಗುಣಮಟ್ಟದ ವೈದ್ಯಕೀಯ ಸೇವೆಯನ್ನು ನೀಡುತ್ತಾ ಬಂದಿದ್ದಾರೆ. ಉತ್ತರ ಕರ್ನಾಟಕ, ಕರಾವಳಿ, ದಕ್ಷಿಣ ಭಾಗದಲ್ಲಿ ಹತ್ತು ಹಲವು ಸಂಸ್ಥೆಗಳು ಮಂಚೂಣಿಯಲ್ಲಿವೆ. ಜೆಎಸ್‌ಎಸ್ ಸಂಸ್ಥೆ ಸಾಮಾನ್ಯ ಜನರಿಗೆ ಕೈಗೆಟುಕುವ ದರದಲ್ಲಿ ಉತ್ತಮ ರೀತಿಯ ಸೇವೆಯನ್ನು ನೀಡುತ್ತಿದೆ. 1960ರ ದಶಕದಲ್ಲಿ ಸರ್ಕಾರ ಮೆಡಿಕಲ್ ಎಂಜಿನಿಯರಿಂಗ್‌ನಂತಹ ವೃತ್ತಿಪರ ಕೋರ್ಸ್‌ಗಳ ಆರಂಭಕ್ಕೆ ಖಾಸಗಿ ಸಂಸ್ಥೆಗಳಿಗೂ ಅವಕಾಶ ನೀಡಿದ್ದರಿಂದ ರಾಜ್ಯದಲ್ಲಿ ವೈದ್ಯಕೀಯ ಕ್ರಾಂತಿ ಸಾಧ್ಯವಾಯಿತು. ಕರ್ನಾಟಕ ರಾಜ್ಯ ವೈದ್ಯಕೀಯ ಹಬ್ ಆಗಿದೆ ಎಂದರು.

ಪರಮಪೂಜ್ಯ ಜಗದ್ಗುರುಗಳವರು ಆಶೀರ್ವಚನ ನೀಡುತ್ತಾ ಪೂಜ್ಯ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಆಶಯದಂತೆ ಬಹಳ ವರ್ಷಗಳ ಹಿಂದೆ

ವಸತಿ ನಿಲಯದ ಮಕ್ಕಳ ದಾಖಲಾತಿಗೆ ಆರೋಗ್ಯ ತಪಾಸಣೆ ಮಾಡಲು ಪ್ರಾರಂಭವಾದ ಪ್ರಾಥಮಿಕ ಆರೋಗ್ಯ ಕೇಂದ್ರ ನಂತರದ ದಿನಗಳಲ್ಲಿ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆಯಾಗಿ ಪರಿವರ್ತನೆಯಾಗಿ ಸಾರ್ವಜನಿಕರಿಗೆ ಆರೋಗ್ಯ ಸೇವೆಯನ್ನು ನೀಡುತ್ತಾ ಬಂದಿದೆ. ಕಾಲಘಟ್ಟಕ್ಕೆ ತಕ್ಕಂತೆ ಅತ್ಯಾಧುನಿಕ ಯಂತ್ರಗಳ ಸೇರ್ಪಡೆ ಜೊತೆಗೆ ರೋಗಿಗಳಿಗೆ ಗುಣಮಟ್ಟದ ಆರೋಗ್ಯ ಸೇವೆಗೆ ಜೆಎಸ್‌ಎಸ್ ಆಸ್ಪತ್ರೆ ಬದ್ಧವಾಗಿದೆ ಎಂದರು.

ತಾಯಿ ಎದೆಹಾಲು ಬ್ಯಾಂಕ್ ಉದ್ಘಾಟಿಸಿದ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರಾದ ಶ್ರೀಮತಿ ನಾಗಲಕ್ಷ್ಮೀ ಚೌಧರಿಯವರು, ತಾಯಿಯ ಎದೆಹಾಲು ಪೌಷ್ಟಿಕಾಂಶಗಳ ಆಗರ. ಇದು ಅಮೃತಕ್ಕೆ ಸಮಾನ. ಇದರ ಮಹತ್ವದ ಬಗ್ಗೆ ಅರಿವು ಮೂಡಿಸಬೇಕು. ಶೇ.30ರಷ್ಟು ಶಿಶುಗಳು ಅವಧಿಪೂರ್ವದಲ್ಲಿ ಜನಿಸುತ್ತಿವೆ. ಅಂತಹ ತಾಯಂದಿರಿಗೆ ಹಾಲಿನ ಸಮಸ್ಯೆ ಇರುತ್ತದೆ. ಬಾಣಂತಿಯರು ಸ್ವಯಂಪ್ರೇರಿತರಾಗಿ ಹಾಲು ನೀಡಿದರೆ ಅನುಕೂಲ ಆಗುತ್ತದೆ. ಜೆಎಸ್‌ಎಸ್ ಆಸ್ಪತ್ರೆಯಲ್ಲಿ ತಾಯಿ ಎದೆಹಾಲು ಬ್ಯಾಂಕ್ ತೆರೆದಿರುವುದು ಹೆಮ್ಮೆಯ ಸಂಗತಿ ಎಂದರು.

ಕ್ಯಾತ್‌ಲ್ಯಾಬ್ ಉದ್ಘಾಟಿಸಿದ ಶಾಸಕರು ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷರಾದ ಶ್ರೀ ಪಿ.ಎಂ. ನರೇಂದ್ರಸ್ವಾಮಿಯವರು ಸುತ್ತೂರು ಶ್ರೀಮಠ ಶಿಕ್ಷಣ, ದಾಸೋಹದ ಜೊತೆಗೆ ಆರೋಗ್ಯ ಸೇವೆಯನ್ನು ನೀಡುತ್ತಾ ಬಂದಿದೆ. ಜನಸಾಮಾನ್ಯರಿಗೆ ನಿಲುಕುವ ದರದಲ್ಲಿ ಆರೋಗ್ಯ ಸೇವೆ ಒದಗಿಸುತ್ತಿದೆ ಎಂದರು.

ನರಶಸ್ತ್ರಚಿಕಿತ್ಸಾ ಸೂಕ್ಷ್ಮದರ್ಶಕಯಂತ್ರವನ್ನು ಉದ್ಘಾಟಿಸಿದ ಶಾಸಕರಾದ ಶ್ರೀ ಟಿ.ಎಸ್. ಶ್ರೀವತ್ಸರವರು ಮಾತನಾಡುತ್ತಾ ಒಂದು ಸರ್ಕಾರ ಮಾಡುವ ಕೆಲಸವನ್ನು ಸುತ್ತೂರು ಶ್ರೀಮಠ ಹಾಗೂ ಜೆಎಸ್‌ಎಸ್ ಆಸ್ಪತ್ರೆ ಮಾಡುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಪ್ರೊ. ಎಸ್.ಪಿ. ಮಂಜುನಾಥ್, ಡಾ. ಬಿ. ಸುರೇಶ್ ಉಪಸ್ಥಿತರಿದ್ದರು. ಡಾ. ಹೆಚ್. ಬಸವನಗೌಡಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ. ಸಿ.ಪಿ. ಮಧು ಸ್ವಾಗತಿಸಿದರು. ಶ್ರೀ ಸುಮಂತ್ ವಸಿಷ್ಠ ಪ್ರಾರ್ಥಿಸಿದರು. ಶ್ರೀ ಆರ್. ಮಹೇಶ್ ವಂದಿಸಿದರು. ಡಾ. ಹೆಚ್.ವಿ. ಸೌಮ್ಯ ಕಾರ್ಯಕ್ರಮ ನಿರೂಪಿಸಿದರು.



ಕ್ಯಾತ್‌ಲ್ಯಾಬ್, ಅತ್ಯಾಧುನಿಕ ಎಐ ಆಧಾರಿತ ಸಿಟಿ ಸ್ಕ್ಯಾನರ್

## ಗ್ಲಾಕೋಮಾವನ್ನು ಆರಂಭಿಕ ಹಂತದಲ್ಲೇ ಗುರುತಿಸುವುದು ಅಗತ್ಯ




ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಆಯೋಜಿಸಿದ್ದ "ಗ್ಲಾಕೋಮಾ ಜಾಗೃತಿ ಅಭಿಯಾನ" ಕಾರ್ಯಕ್ರಮವನ್ನು ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿಗಳಾದ ಪ್ರೊ. ಎಸ್.ಪಿ. ಮಂಜುನಾಥ್‌ರವರು ಉದ್ಘಾಟಿಸಿದರು. ಡಾ. ಸೌಮ್ಯ, ಡಾ. ಸಿ.ಪಿ. ಮಧು, ಡಾ. ಪಿ.ಸಿ. ಕುಮಾರಸ್ವಾಮಿ, ಡಾ. ಹೆಚ್. ಬಸವನಗೌಡಪ್ಪ, ಶ್ರೀ ಆರ್. ಮಹೇಶ್, ಡಾ. ಬಿ. ಬೃಂದಾ ಮೊದಲಾದವರುಗಳಿದ್ದಾರೆ. (25 ಮಾರ್ಚ್ 2026)

ಗ್ಲಾಕೋಮಾವನ್ನು ಆರಂಭಿಕ ಹಂತದಲ್ಲೇ ಗುರುತಿಸುವುದರಿಂದ ದೃಷ್ಟಿ ಉಳಿಸಿಕೊಳ್ಳಬಹುದು ಎಂದು ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿಗಳಾದ ಪ್ರೊ. ಎಸ್.ಪಿ. ಮಂಜುನಾಥ್‌ರವರು ಹೇಳಿದರು.

ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ದಿನಾಂಕ 25.3.2026ರಂದು ಆಯೋಜಿಸಿದ್ದ "ಗ್ಲಾಕೋಮಾ ಜಾಗೃತಿ ಅಭಿಯಾನ" ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಾ ತಿಳಿಸಿದರು. ಮನುಷ್ಯರಿಗೆ ಪ್ರತಿಯೊಂದು ಅಂಗವು ಪ್ರಮುಖವಾದದ್ದು. ಅದರಲ್ಲಿ ಕಣ್ಣು ಪ್ರಧಾನ ಅಂಗವಾಗಿದೆ. ಬೇರೆ ಅಂಗಗಳಿಗೆ ತೊಂದರೆಯಾದರೆ ಅಥವಾ ಖಾಯಿಲೆ ಬಂದರೆ ಮುನ್ಸೂಚನೆ ಸಿಗುತ್ತದೆ. ಆದರೆ ಗ್ಲಾಕೋಮಾ ಕಾಯಿಲೆಯು ಯಾವುದೇ ಮುನ್ಸೂಚನೆ ನೀಡದೆ ಕಣ್ಣಿನ ದೃಷ್ಟಿಯನ್ನು ಹಾಳು ಮಾಡುತ್ತದೆ. ಈ ಕಾಯಿಲೆಯು ಯಾವುದೇ ವಯೋಮಾನದವರಿಗೆ ಬರಬಹುದು. ಜೀವನಪರ್ಯಂತ ಇದಕ್ಕೆ ಚಿಕಿತ್ಸೆ ಅವಶ್ಯಕ, ಆದ್ದರಿಂದ ನಿಯಮಿತವಾಗಿ ಕಣ್ಣಿನ ತಪಾಸಣೆ ಮತ್ತು ಪರೀಕ್ಷೆಗಳನ್ನು ಮಾಡಿಸಿ ಗ್ಲಾಕೋಮಾವನ್ನು ನಿಯಂತ್ರಿಸಬಹುದು. ಗ್ಲಾಕೋಮಾ ಬಗ್ಗೆ ಅರಿವು ಮತ್ತು ಜಾಗೃತಿ ಮೂಡಿಸುವ ಉದ್ದೇಶದಿಂದ ಇಂತಹ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದ್ದು ಇದರ ಮುಖಾಂತರ ಸಾರ್ವಜನಿಕರಿಗೆ ಹೆಚ್ಚಿನ ಮಾಹಿತಿ ಮತ್ತು ಅರಿವು ಸಿಗುವಂತಾಗಲಿ ಎಂದರು.

ಮೈಸೂರು ಜಿಲ್ಲಾ ಆರೋಗ್ಯ ಅಧಿಕಾರಿಗಳಾದ ಡಾ. ಪಿ.ಸಿ. ಕುಮಾರಸ್ವಾಮಿಯವರು, ಇತ್ತೀಚಿನ ದಿನಗಳಲ್ಲಿ

ಗ್ಲಾಕೋಮಾ ತೊಂದರೆಯ ಬಗ್ಗೆ ಜನರಲ್ಲಿ ಜಾಗೃತಿ ಮೂಡುತ್ತಿದೆ. ಗ್ಲಾಕೋಮಾ ಎನ್ನುವುದು ಕಣ್ಣಿನ ಆಪ್ಟಿಕ್ ನರಕ್ಕೆ ಹಾನಿಯುಂಟುಮಾಡುವ ಗಂಭೀರ ಸ್ವರೂಪದ ಕಾಯಿಲೆಯಾಗಿದೆ. ಚಿಕಿತ್ಸೆ ನೀಡದಿದ್ದರೆ ಶಾಶ್ವತ ಕುರುಡುತನಕ್ಕೆ ಕಾರಣವಾಗಬಹುದು. ಇದು ಹೆಚ್ಚಾಗಿ ಕಣ್ಣಿನ ಒಳಭಾಗದ ಒತ್ತಡ ಹೆಚ್ಚಾಗುವುದರಿಂದ ಉಂಟಾಗುತ್ತದೆ. 40 ವರ್ಷಕ್ಕಿಂತ ಮೇಲ್ಪಟ್ಟವರಲ್ಲಿ, ವಿಶೇಷವಾಗಿ 60 ವರ್ಷ ದಾಟಿದವರಲ್ಲಿ ಇದರ ಅಪಾಯ ಹೆಚ್ಚು. ಆರಂಭಿಕ ಹಂತದಲ್ಲಿ ಲಕ್ಷಣಗಳಿಲ್ಲದಿದ್ದರೂ, ನಂತರದ ಹಂತದಲ್ಲಿ ದೃಷ್ಟಿ ಮಂದವಾಗುವುದು ಅಥವಾ ಬಾಹ್ಯ ದೃಷ್ಟಿ ಕಳೆದುಕೊಳ್ಳುವುದು ಕಂಡುಬರುತ್ತದೆ. ಆದ್ದರಿಂದ ಗ್ಲಾಕೋಮಾದಿಂದ ಕಳೆದುಹೋದ ದೃಷ್ಟಿಯನ್ನು ಮರಳಿ ಪಡೆಯಲು ಸಾಧ್ಯವಿಲ್ಲ. ಆದರೆ ಆರಂಭಿಕ ಪತ್ತೆ ಮತ್ತು ಚಿಕಿತ್ಸೆಯಿಂದ ಅಂಧತ್ವವನ್ನು ತಡೆಯಬಹುದು. ಇದಕ್ಕೆ ನಿಯಮಿತವಾಗಿ ಕಣ್ಣಿನ ಪರೀಕ್ಷೆ ಮಾಡಿಸಿಕೊಳ್ಳುವುದು ಅತ್ಯಗತ್ಯ ಎಂದರು.

ಜೆಎಸ್‌ಎಸ್ ಆಸ್ಪತ್ರೆಯ ನಿರ್ದೇಶಕರಾದ ಡಾ. ಸಿ.ಪಿ. ಮಧುರವರು ಮಾತನಾಡಿ, ಗ್ಲಾಕೋಮಾ ಜಾಗೃತಿ ಅಭಿಯಾನದ ಅಂಗವಾಗಿ ಜೆಎಸ್‌ಎಸ್ ಆಸ್ಪತ್ರೆಯ ವತಿಯಿಂದ ರಿಯಾಯಿತಿ ದರದಲ್ಲಿ ಗ್ಲಾಕೋಮ ತಪಾಸಣೆ ಪ್ಯಾಕೇಜ್‌ಗೆ ಇಂದು ಚಾಲನೆ ನೀಡಲಾಗುತ್ತಿದೆ. 2525 ರೂ.ಗಳ ಮೊತ್ತದ ಪರೀಕ್ಷೆಗಳನ್ನು ಕೇವಲ 1699 ರೂಗಳಿಗೆ ನೀಡಲಾಗುತ್ತಿದೆ. ಈ ಪ್ಯಾಕೇಜ್ ಏಪ್ರಿಲ್ 1ರಿಂದ ಪ್ರಾರಂಭವಾಗಿ ಜೂನ್ 30ರವರೆಗೆ ಚಾಲ್ತಿಯಲ್ಲಿರುತ್ತದೆ. ಈ ಅವಕಾಶವನ್ನು ಸಾರ್ವಜನಿಕರು ಉಪಯೋಗಿಸಿಕೊಳ್ಳಬೇಕೆಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ವಿದ್ಯಾರ್ಥಿಗಳಿಂದ ಗ್ಲಾಕೋಮಾ ಕುರಿತು ಕಿರುನಾಟಕದ ಮೂಲಕ ಸಾರ್ವಜನಿಕರಿಗೆ ಜಾಗೃತಿ ಮೂಡಿಸಲಾಯಿತು. ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ಕುಲಪತಿಗಳಾದ ಡಾ. ಹೆಚ್. ಬಸವನಗೌಡಪ್ಪ, ಜೆಎಸ್‌ಎಸ್ ಮಹಾವಿದ್ಯಾಪೀಠದ ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕರಾದ ಶ್ರೀ ಆರ್. ಮಹೇಶ್, ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿಗಳಾದ, ಡಾ. ಬಿ. ಬೃಂದಾ, ಜೆಎಸ್‌ಎಸ್ ಆಸ್ಪತ್ರೆಯ ಸ್ಥಾನೀಯ ವೈದ್ಯಾಧಿಕಾರಿಗಳಾದ ಡಾ. ಶಾಂತಮಲ್ಲಪ್ಪ, ನೇತ್ರಚಿಕಿತ್ಸಾ ವಿಭಾಗದ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರಾದ ಡಾ. ಸೌಮ್ಯ ಮೊದಲಾದವರು ಉಪಸ್ಥಿತರಿದ್ದರು.




ಗ್ಲಾಕೋಮಾ ಜಾಗೃತಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳು ಭಿತ್ತಿಪತ್ರಗಳನ್ನು ಪ್ರದರ್ಶಿಸುತ್ತಿರುವುದು

## ವಾಕ್‌ಮೇಟ್ ಸಂಸ್ಥೆಯಿಂದ ಜೆಎಸ್‌ಎಸ್ ಆಸ್ಪತ್ರೆಗೆ 10 ಲಕ್ಷ ರೂ.ಗಳ ದೇಣಿಗೆ




ಜೆಎಸ್‌ಎಸ್ ಆಸ್ಪತ್ರೆಗೆ ಡಯಾಲಿಸಿಸ್ ಚಿಕಿತ್ಸೆಗಾಗಿ ಬರುವ ಬಡರೋಗಿಗಳಿಗೆ ಆರ್ಥಿಕ ಸಹಾಯ ನೀಡಲು 10 ಲಕ್ಷ ರೂ.ಗಳ ಚೆಕ್ ಅನ್ನು ಲೂನಾರ್ ಎಕ್ಸ್‌ಪೋರ್ಟ್ಸ್ ಪ್ರೈವೇಟ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಬಾಸ್ಟಿಯನ್ ಜೋಸೆಫ್‌ರವರು ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಹಸ್ತಾಂತರಿಸಿದರು. ಶ್ರೀ ಕೆ.ಎಂ. ಭಗವಾನ್, ಡಾ. ಸಿ.ಪಿ. ಮಧು, ಡಾ. ಬಿ. ಸುರೇಶ್, ಡಾ. ನಾಗಲಕ್ಷ್ಮೀ ಚೌಧರಿ, ಡಾ. ಶರಣಪ್ರಕಾಶ್ ಆರ್. ಪಾಟೀಲ್, ಶ್ರೀ ಪಿ.ಎಂ. ನರೇಂದ್ರಸ್ವಾಮಿ, ಶ್ರೀ ಟಿ.ಎಸ್. ಶ್ರೀವತ್ಸ ಮತ್ತು ಶ್ರೀ ಸಿ. ಕುಮಾರಸ್ವಾಮಿಯವರುಗಳಿದ್ದಾರೆ (29 ಮಾರ್ಚ್ 2026)

**ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ** ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳ ದಿವ್ಯ ಸಾನ್ನಿಧ್ಯದಲ್ಲಿ ದಿನಾಂಕ 29.3.2026ರಂದು ನಡೆದ ಕ್ಯಾತ್‌ಲ್ಯಾಬ್, ಅತ್ಯಾಧುನಿಕ ಎಐ ಆಧಾರಿತ ಸಿಟಿ ಸ್ಕ್ಯಾನರ್, ಉನ್ನತಿಕರಿಸಿದ ಎಂಆರ್‌ಐ, ನರಶಸ್ತ್ರಚಿಕಿತ್ಸಾ ಸೂಕ್ಷ್ಮದರ್ಶಕಯಂತ್ರ ಹಾಗೂ ತಾಯಿ ಎದೆಹಾಲಿನ ಬ್ಯಾಂಕ್‌ಗಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಲೂನಾರ್ ಎಕ್ಸ್‌ಪೋರ್ಟ್ಸ್ ಪ್ರೈವೇಟ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಬಾಸ್ಟಿಯನ್ ಜೋಸೆಫ್‌ರವರು ಸಂಸ್ಥೆಯ ಸಿಎಸ್‌ಆರ್ ನಿಧಿಯಿಂದ ಜೆಎಸ್‌ಎಸ್ ಆಸ್ಪತ್ರೆಗೆ ಡಯಾಲಿಸಿಸ್ ಚಿಕಿತ್ಸೆಗೆ ಬರುವ ಬಡರೋಗಿಗಳಿಗೆ ಆರ್ಥಿಕವಾಗಿ ಸಹಾಯವಾಗಲು 10 ಲಕ್ಷ ರೂ.ಗಳನ್ನು ದೇಣಿಗೆಯನ್ನು ಹಸ್ತಾಂತರಿಸಿದರು.

ಈ ಸಂದರ್ಭದಲ್ಲಿ ಪೂಜ್ಯ ಶ್ರೀಗಳವರು ರೋಗಿಗಳ ಅನುಕೂಲಕ್ಕಾಗಿ ಅನೇಕ ಸಂಘ ಸಂಸ್ಥೆಗಳು ಮತ್ತು ದಾನಿಗಳು ಆಸ್ಪತ್ರೆಗೆ ದೇಣಿಗೆಯನ್ನು ನೀಡುತ್ತಿದ್ದಾರೆ, ಇವರ ಸಮಾಜಮುಖಿ ಕಾರ್ಯ ಹೀಗೆಯೇ ಮುಂದುವರೆಯಲಿ ಎಂದು ಆಶಿಸಿದರು.


'ಜೆಎಸ್‌ಎಸ್–ವಾಕ್‌ಮೇಟ್ ಸಬ್ಸಿಡಿ ಡಯಾಲಿಸಿಸ್ ಟ್ರೀಟ್‌ಮೆಂಟ್ ಪ್ರೋಗ್ರಾಂ' ಎಂಬ ಶೀರ್ಷಿಕೆಯಡಿ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು ಈ ಯೋಜನೆಯಡಿಯಲ್ಲಿ ಬಿಪಿಎಲ್ ಕಾರ್ಡ್ ಹೊಂದಿರುವ ಡಯಾಲಿಸಿಸ್ ಚಿಕಿತ್ಸೆಗಾಗಿ ಬರುವ ರೋಗಿಗಳನ್ನು ಫಲಾನುಭವಿಗಳಾಗಿ ಗುರುತಿಸಿ, ಅವರ ಡಯಾಲಿಸಿಸ್ ಚಿಕಿತ್ಸಾ ವೆಚ್ಚದಲ್ಲಿ ರಿಯಾಯಿತಿಯನ್ನು ನೀಡಲಾಗುವುದು. ಜೆಎಸ್‌ಎಸ್ ಆಸ್ಪತ್ರೆಯು ಡಯಾಲಿಸಿಸ್ ರೋಗಿಗಳಿಗೆ ಅತ್ಯಂತ ಕಡಿಮೆ ದರದಲ್ಲಿ ಚಿಕಿತ್ಸೆ ನೀಡುತ್ತಿದ್ದು ಸಾವಿರಾರು ರೋಗಿಗಳು ಈ ಪ್ರಯೋಜನ ಪಡೆದುಕೊಳ್ಳುತ್ತಿದ್ದಾರೆ.

ಈ ಸಂದರ್ಭದಲ್ಲಿ ವೈದ್ಯಕೀಯ ಶಿಕ್ಷಣ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಸಚಿವರಾದ ಡಾ. ಶರಣ ಪ್ರಕಾಶ್ ಆರ್. ಪಾಟೀಲ, ಶಾಸಕರು ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷರಾದ ಶ್ರೀ ಪಿ.ಎಂ. ನರೇಂದ್ರಸ್ವಾಮಿ, ಶಾಸಕರಾದ ಶ್ರೀ ಟಿ.ಎಸ್. ಶ್ರೀವತ್ಸ, ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರಾದ ಡಾ. ನಾಗಲಕ್ಷ್ಮೀ ಚೌಧರಿ ಇನ್ನಿತರರು ಆಗಮಿಸಿ ಆಸ್ಪತ್ರೆಯ




ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ 289ನೇ ಬೆಳದಿಂಗಳ ಸಂಗೀತ ಕಾರ್ಯಕ್ರಮದಲ್ಲಿ ವಿದ್ವಾನ್ ಕಾರ್ತಿಕ್ ಮತ್ತೂರ್‌ರವರು ಗಾಯನ ಪ್ರಸ್ತುತಿ ಪಡಿಸಿದರು. ಪಕ್ಕವಾದ್ಯ ಸಹಕಾರದಲ್ಲಿ ವಿದ್ವಾನ್ ಫಣೀಂದ್ರ ಭಾಸ್ಕರ, ವಿದ್ವಾನ್ ಶರತ್ ಕೌಶಿಕ್ ಮತ್ತು ವಿದ್ವಾನ್ ಕೇಶವ ಮೋಹನ್‌ಕುಮಾರ್‌ರವರುಗಳಿದ್ದಾರೆ. (3 ಮಾರ್ಚ್ 2026)

## ಮಹಿಳೆಯರೂ ಜೀವನ ಯಶಸ್ವಿಯಾಗಿ ನಡೆಸಬಹುದು



ಬೆಂಗಳೂರಿನ ಜೆಎಸ್‌ಎಸ್ ಜನ ಶಿಕ್ಷಣ ಸಂಸ್ಥೆ ವತಿಯಿಂದ ಜಯನಗರದ ಶ್ರೀ ಶಿವರಾತ್ರಿರಾಜೇಂದ್ರ ಚಿಂತನ ಮಂಟಪದಲ್ಲಿ ಏರ್ಪಡಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ಫಲಾನುಭವಿಗಳ ಸಮಾಗಮ ಸಮಾರಂಭವನ್ನು ಶ್ರೀಮತಿ ಸುಧಾ ಮೃತ್ಯುಂಜಯಪ್ಪನವರು ಉದ್ಘಾಟಿಸುತ್ತಿರುವುದು. (13 ಮಾರ್ಚ್ 2026)

ಮಹಿಳೆಯರು ಇಂದು ಕೇವಲ ಮನೆ ಕೆಲಸಕ್ಕೆ ಮಾತ್ರ ಸೀಮಿತರಾಗದೆ, ಬಾಹ್ಯಾಕಾಶ, ವೈಮಾನಿಕ, ಕೃಷಿ, ರಾಜಕೀಯ, ಸಾಮಾಜಿಕ, ಶೈಕ್ಷಣಿಕ ಕ್ಷೇತ್ರಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುವುದು ಶ್ಲಾಘನೀಯ ವಿಚಾರ ಎಂದು ನಿವೃತ್ತ ಐಎಎಸ್ ಅಧಿಕಾರಿಗಳು ಹಾಗೂ ಬೆಂಗಳೂರಿನ ಜೆಎಸ್‌ಎಸ್ ಜನ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿ ಅಧ್ಯಕ್ಷರಾದ ಶ್ರೀ ಎಂ.ಬಿ. ದ್ಯಾಬೇರಿಯವರು ತಿಳಿಸಿದರು.

ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠದ ಆಶ್ರಯದಲ್ಲಿ ಹಾಗೂ ಭಾರತ ಸರ್ಕಾರದ ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತಾ ಸಚಿವಾಲಯದ ಪ್ರಾಯೋಜಿತ ಸಂಸ್ಥೆಯಾದ ಬೆಂಗಳೂರಿನ ಜೆಎಸ್‌ಎಸ್ ಜನ ಶಿಕ್ಷಣ ಸಂಸ್ಥೆ ವತಿಯಿಂದ ಜಯನಗರ 8ನೇ ಬಡಾವಣೆಯ ಶ್ರೀ ಶಿವರಾತ್ರಿರಾಜೇಂದ್ರ ಚಿಂತನ ಮಂಟಪದಲ್ಲಿ ದಿನಾಂಕ 13.3.2026ರಂದು ಏರ್ಪಡಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ಫಲಾನುಭವಿಗಳ ಸಮಾಗಮ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಆಧುನಿಕ ಜಗತ್ತಿನಲ್ಲಿ ಕೇವಲ ಪುರುಷರು ಮಾತ್ರ ದುಡಿದರೆ ಕುಟುಂಬ ನಿರ್ವಹಣೆಗೆ ಸಾಕಾಗುವುದಿಲ್ಲ ಆದ್ದರಿಂದ ಮಹಿಳೆಯರು ತಮ್ಮ ಬಿಡುವಿನ ವೇಳೆಯಲ್ಲಿ ಹೊಸ ವಿನ್ಯಾಸಗಳ ಕರಕುಶಲ ವಸ್ತುಗಳಾದ ತೆಂಗಿನ ಚಿಪ್ಪಿನಿಂದ, ನಾರಿನಿಂದ, ಬಿದರಿನ ವಸ್ತುಗಳಿಂದ, ಬಾಳೆದಿಂಡಿನ ನಾರಿನಿಂದ, ಅನೇಕ ರೀತಿಯ ಅಲಂಕಾರಿಕ ಹಾಗೂ ಗೃಹೋಪಯೋಗಿ ಉತ್ಪನ್ನಗಳನ್ನು ತಯಾರಿಸುವ ತರಬೇತಿಯನ್ನು ಪಡೆದರೆ ತಮ್ಮ ಜೀವನ ಯಶಸ್ವಿಯಾಗಿ ನಡೆಸಬಹುದು. ಕೇರಳದ ತಿರುವನಂತಪುರದ ಕೋವಲಂ ನಲ್ಲಿರುವ ಆರ್ಟ್ಸ್ ಅಂಡ್ ಕ್ರಾಫ್ಟ್ ಸಂಸ್ಥೆಯು 100 ಕ್ಕೂ ಹೆಚ್ಚು ಜನರಿಗೆ ಕರಕುಶಲ ತರಬೇತಿಯನ್ನು ನೀಡಿ ಸುಮಾರು 20 ಸಾವಿರಕ್ಕೂ ಹೆಚ್ಚು ಕಲಾಕೃತಿಗಳನ್ನು ತಯಾರಿಸಿ ವಿಶ್ವ ಮಟ್ಟದಲ್ಲಿ ಗುರುತಿಸಿಕೊಂಡಿದೆ. ಬೆಂಗಳೂರಿನ ಜೆಎಸ್‌ಎಸ್ ಜನ ಶಿಕ್ಷಣ ಸಂಸ್ಥೆಯಿಂದ ಒಂದು ನಿಯೋಗ ಅಲ್ಲಿಗೆ ತೆರಳಿ ಅಲ್ಲಿನ

ಮುಖ್ಯಸ್ಥರೊಂದಿಗೆ ಸಮಾಲೋಚಿಸಿ ನಮ್ಮ ವೃತ್ತಿ ಬೋಧಕರಿಗೆ ತರಬೇತಿ ನೀಡಲು ಸಂಪನ್ಮೂಲ ವ್ಯಕ್ತಿಗಳನ್ನು ಕರೆಸಿ ತರಬೇತಿಗಳನ್ನು ನೀಡಿದಾಗ ಕರ್ನಾಟಕದ ಹೆಣ್ಣು ಮಕ್ಕಳಿಗೂ ಅನುಕೂಲವಾಗುತ್ತದೆ ಎಂದು ತಿಳಿಸಿದರು.

ಬೆಂಗಳೂರಿನ ಜೆಎಸ್‌ಎಸ್ ಜನ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷರು ಹಾಗೂ ಸಮಾಜ ಸೇವಕರಾದ ಶ್ರೀಮತಿ ಸುಧಾ ಮೃತ್ಯುಂಜಯಪ್ಪನವರು ಮಾತನಾಡಿ, ಎಲ್ಲಿ ಮಹಿಳೆಯರನ್ನು ಗೌರವಿಸುತ್ತಾರೆ ಅಲ್ಲಿ ದೇವತೆಗಳು ನೆಲೆಸಿರುತ್ತಾರೆ ಎಂದು ಹಿಂದೆಯೇ ಹೇಳಲಾಗಿದೆ. ಇಂದು ಮಹಿಳೆಯರನ್ನು ಗೌರವಿಸಲಾಗುತ್ತಿದೆ, ಆದರೆ ಇಂದು ಮಹಿಳೆಯರಿಗೆ ಖಾಸಗಿ ಹಾಗೂ ಸರ್ಕಾರಿ ಕಛೇರಿಗಳಲ್ಲಿ ಅವಕಾಶಗಳು ಕಡಿಮೆಯಿವೆ. ಮಹಿಳೆಯರಿಗೆ ಖಾಸಗಿ ಹಾಗೂ ಸರ್ಕಾರಿ ಕಚೇರಿಗಳಲ್ಲಿ ಉದ್ಯೋಗದ ಅವಕಾಶ ಹೆಚ್ಚು ಕಲ್ಪಿಸಿದಾಗ ಸಮಾನತೆ ಕಾಣಬಹುದು. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹಿಳೆಯರಾದ ಕಲ್ಪನಾ ಚಾವ್ಲಾ, ಇಂದಿರಾಗಾಂಧಿ, ದ್ರೌಪದಿ ಮುರ್ಮು, ಕಿತ್ತೂರುರಾಣಿ ಚೆನ್ನಮ್ಮ, ಸುಧಾ ಮೂರ್ತಿ, ಸುನಿತಾ ವಿಲಿಯಮ್ಸ್, ಮುಂತಾದ ಮಹಿಳೆಯರ ಆದರ್ಶವನ್ನು ಮೈಗೂಡಿಸಿಕೊಳ್ಳಬೇಕು ಎಂದು ಹೇಳಿದರು.

ಇಸ್ರೋ ಸಂಸ್ಥೆಯ ಮಾಜಿ ವಿಜ್ಞಾನಿಗಳಾದ ಶ್ರೀ ರಾಜಶೇಖರ್ ಕೃಷ್ಣನ್, ಬೆಂಗಳೂರು ಜೆಎಸ್‌ಎಸ್ ಜನ ಶಿಕ್ಷಣ ಸಂಸ್ಥೆ ಆಡಳಿತ ಮಂಡಳಿಯ ಸದಸ್ಯರಾದ ಶ್ರೀಮತಿ ಪ್ರಮೀಳಾ ಶಿವಕುಮಾರ್, ಜೆಎಸ್‌ಎಸ್ ಜನ ಶಿಕ್ಷಣ ಅವರುಗಳು ಸಂಸ್ಥೆಯ ತರಬೇತಿಗಳಿಗೆ ಹೊಲಿಗೆ ಯಂತ್ರಗಳನ್ನು ನೀಡುತ್ತೇವೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಸಾಂಸ್ಕೃತಿಕ ಚಟುವಟಿಕೆಗಳಾದ ಹಾಡು, ನೃತ್ಯ, ಭರತನಾಟ್ಯ ಪ್ರದರ್ಶನವನ್ನು ಕಲಿಕಾರ್ಥಿಗಳು ನಡೆಸಿಕೊಟ್ಟರು. ಮಹಿಳಾ ದಿನಾಚರಣೆಯ ಅಂಗವಾಗಿ ಕಲಿಕಾರ್ಥಿಗಳಿಗೆ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಲಾಗಿದ್ದು, ವಿಜೇತರಾದವರಿಗೆ ಬಹುಮಾನಗಳನ್ನು ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಬೆಂಗಳೂರಿನ ಜೆಎಸ್‌ಎಸ್ ಜನ ಶಿಕ್ಷಣ ಸಂಸ್ಥೆ ನಿರ್ದೇಶಕರಾದ ಶ್ರೀಮತಿ ಡಿ.ಎಂ. ಶಶಿಕಲಾ, ಜಯನಗರದ ಜೆಎಸ್‌ಎಸ್ ಸಮನ್ವಯ ಮತ್ತು ವಿಶೇಷ ಶಾಲೆಯ ಮುಖ್ಯಸ್ಥರಾದ ಶ್ರೀ ದೊಡ್ಡಗುಡ್ಡಯ್ಯ, ಜೆಎಸ್‌ಎಸ್ ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರಾದ ಶ್ರೀಮತಿ ಲತಾ, ಜೆಎಸ್‌ಎಸ್ ಜನ ಶಿಕ್ಷಣ ಸಂಸ್ಥೆ ಕಾರ್ಯಕ್ರಮಾಧಿಕಾರಿ ಶ್ರೀ ಎಲ್. ಅಶೋಕ, ಸಿಬ್ಬಂದಿ ವರ್ಗ, ವೃತ್ತಿ ಬೋಧಕರು, ಕಲಿಕಾರ್ಥಿಗಳು, ಫಲಾನುಭವಿಗಳು ಭಾಗವಹಿಸಿದ್ದರು.

**ಜೆಎಸ್‌ಎಸ್ ವಾರ್ತಾಪತ್ರಕ್ಕೆ ಕಳುಹಿಸುವ**
**ವರದಿಗಳು ಮತ್ತು ಛಾಯಾಚಿತ್ರಗಳನ್ನು ಕಡ್ಡಾಯವಾಗಿ**
**varthapathra@jssonline.org ಗೆ ಮಾತ್ರ ಕಳುಹಿಸುವುದು.**
**ಬೇರೆ ಯಾವುದೇ ಇಮೇಲ್‌ಗೆ ಕಳುಹಿಸಬಾರದು.**

**ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ**
**ಪ್ರಕಟಣ ವಿಭಾಗ, ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು**
**ದೂರವಾಣಿ : 9663151846, 9480771995**
**8861654566, 9964161363**

# ಗುರಿ ತಲುಪಲು ಸ್ಪರ್ಧಾ ಮನೋಭಾವ ಅವಶ್ಯಕ




ಮೈಸೂರಿನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ 'ವರ್ಧಿನಿ' ಎಂಬ ರಾಜ್ಯ ಮಟ್ಟದ ಕಲಾ ಸಂಭ್ರಮ –2026ರ ಕಾರ್ಯಕ್ರಮವನ್ನು ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿಗಳಾದ ಪ್ರೊ. ಎಸ್.ಪಿ. ಮಂಜುನಾಥ್‌ರವರು ಉದ್ಘಾಟಿಸಿ ಮಾತನಾಡುತ್ತಿರುವುದು. (24 ಮಾರ್ಚ್ 2026)

ಯಶಸ್ಸಿನ ಗುರಿ ತಲುಪಲು ಸ್ಪರ್ಧಾಮನೋಭಾವ ಮತ್ತು ವೇದಿಕೆ ಅವಶ್ಯಕವಾಗಿದೆ ಎಂದು ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿಗಳಾದ ಪ್ರೊ. ಎಸ್.ಪಿ. ಮಂಜುನಾಥ್‌ರವರು ಹೇಳಿದರು.

**ಮೈಸೂರಿನ ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನ** ನವಜ್ಯೋತಿ ಸಭಾಂಗಣದಲ್ಲಿ ದಿನಾಂಕ 24.03.2026ರಂದು 'ವರ್ಧಿನಿ' ಎಂಬ ರಾಜ್ಯ ಮಟ್ಟದ ಕಲಾ ಸಂಭ್ರಮ –2026ರ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಾ ಅವರು ತಿಳಿಸಿದರು. ಯಶಸ್ಸಿನ ಗುರಿ ತಲುಪಲು ಸ್ಪರ್ಧಾ ಮನೋಭಾವ ಮತ್ತು ವೇದಿಕೆ ಅವಶ್ಯಕವಾಗಿದೆ. ವಿದ್ಯಾರ್ಥಿಗಳು ಶೈಕ್ಷಣಿಕ ಚಟುವಟಿಕೆಗಳ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದರಿಂದ ವ್ಯಕ್ತಿತ್ವ ಬೆಳವಣಿಗೆ ಸಾಧ್ಯ. ಸ್ಪರ್ಧೆಯಲ್ಲಿ ಸೋಲು ಗೆಲುವಿಗಿಂತ ಭಾಗವಹಿಸುವುದು ಬಹಳ ಮುಖ್ಯ ಎಂದು ತಿಳಿಸಿದರು.

ರಾಜ್ಯ ಪ್ರಶಸ್ತಿ ಪುರಸ್ಕೃತ ಚಲನಚಿತ್ರ ನಟಿ ಹಾಗೂ ಕಾಲೇಜಿನ ಹಿರಿಯ ವಿದ್ಯಾರ್ಥಿನಿಯಾದ ಶ್ರೀಮತಿ ಅಕ್ಷತಾ ಪಾಂಡವಪುರರವರು ಮಾತನಾಡಿ, ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದ ಆ ದಿನಗಳನ್ನು ನೆನಪು ಮಾಡಿಕೊಳ್ಳುವುದೇ ಒಂದು ಸುಂದರ ಅನುಭವ. ವಿದ್ಯಾರ್ಥಿ ದೆಸೆಯಲ್ಲಿ ಕಲೆಯ ವಿವಿಧ ಪ್ರಕಾರಗಳಾದ ಸಾಹಿತ್ಯ, ಸಂಗೀತ, ನೃತ್ಯ ಹಾಗೂ ಕ್ರೀಡಾ ಮನೋಭಾವವನ್ನು ಬೆಳೆಸಿಕೊಳ್ಳಬೇಕು. ವಿದ್ಯಾರ್ಥಿಗಳು ವೇದಿಕೆಗಳನ್ನು ಏರುವುದು ನಿಜವಾದ ಯಶಸ್ಸಿನ ಗೆಲುವು ಎಂದು ತಿಳಿಸಿದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕರಾದ ಪ್ರೊ. ಮೊರಬದ ಮಲ್ಲಿಕಾರ್ಜುನರವರು ಮಾತನಾಡಿ, ವಿದ್ಯಾರ್ಥಿಗಳು ಸೃಜನಶೀಲ ಬರವಣಿಗೆಯನ್ನು ರೂಢಿಸಿಕೊಳ್ಳಬೇಕು. ಹೆಣ್ಣು ಎಲ್ಲರನ್ನೂ ಒಳಗೊಂಡು ವಿಸ್ತರಿಸುವ ಜಗತ್ತನ್ನು

ಸೃಷ್ಟಿಸುತ್ತಾರೆ. ಎಲ್ಲರನ್ನೂ ಒಳಗೊಳ್ಳುವ ಗುಣವನ್ನು 'ವರ್ಧಿನಿ'ಯಂತಹ ವೇದಿಕೆಗಳು ನೀಡುತ್ತವೆ ಎಂದರು.

ಫೆಸ್ಟ್‌ನಲ್ಲಿ ಸ್ಪರ್ಧಾ ಕಾರ್ಯಕ್ರಮಗಳಾದ ಭಾವನವೀನ, ರಾಗನಿನಾದ, ವರ್ಣ ಚಿತ್ತಾರ, ರಸಪಾಕ, ಹೆಜ್ಜೆ ಗೆಜ್ಜೆ ಮತ್ತು ವಾಗ್ವಿಲಾಸದಲ್ಲಿ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಪ್ರಾಂಶುಪಾಲರಾದ ಡಾ. ರೇಚಣ್ಣ, ಸಂಚಾಲಕರಾದ ಶ್ರೀ ಹೊನ್ನಶೆಟ್ಟಿ ಉಪಸ್ಥಿತರಿದ್ದರು. ಕಾಲೇಜಿನ ಸಿಬ್ಬಂದಿ ವರ್ಗ ಮತ್ತು ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಕು. ಚಂದನ ಮತ್ತು ತಂಡದವರು ಪ್ರಾರ್ಥಿಸಿದರು. ಕು. ಎಸ್.ಎಂ. ಸಹನ ಸ್ವಾಗತಿಸಿದರು. ಕು. ಸಂಜನ ವಂದಿಸಿದರು. ಕು. ಎಲ್. ಸಂಜನ ಕಾರ್ಯಕ್ರಮ ನಿರೂಪಿಸಿದರು.

---




ಸುತ್ತೂರು ಶ್ರೀಕ್ಷೇತ್ರದಲ್ಲಿ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಹಾಗೂ ಜೆಎಸ್‌ಎಸ್ ವಸತಿ ಶಾಲೆ ಸಹಯೋಗದೊಂದಿಗೆ ನಡೆದ ಯೋಗ ಮಹೋತ್ಸವದ ಉದ್ಘಾಟನಾ ಸಮಾರಂಭದಲ್ಲಿ ಜೆಎಸ್‌ಎಸ್ ಎಎಚ್‌ಇಆರ್ ಕುಲಸಚಿವರಾದ ಶ್ರೀ ಬಿ. ಮಂಜುನಾಥ್, ಡಾ. ಸುಜನ್, ಜೆಎಸ್‌ಎಸ್ ಸಂಸ್ಥೆಗಳ ಸಹಾಯುಕ ಆಡಳಿತಾಧಿಕಾರಿಗಳಾದ ಶ್ರೀ ಜಿ.ಎಲ್. ತ್ರಿಪುರಾಂತಕ, ಸುತ್ತೂರು ಗ್ರಾಮ ಪಂಚಾಯಿತಿ ಅಧ್ಯಕ್ಷ ಶ್ರೀ ರಂಗಸ್ವಾಮಿರವರು ಪಾಲ್ಗೊಂಡಿದ್ದರು. (24 ಮಾರ್ಚ್ 2026)



ಯೋಗ ಮಹೋತ್ಸವದಲ್ಲಿ ಪಾಲ್ಗೊಂಡಿರುವ ವಿದ್ಯಾರ್ಥಿಗಳು

## ವಿದ್ಯಾರ್ಥಿಗಳಲ್ಲಿ ಕ್ರಿಯಾಶೀಲ ಕೌಶಲ್ಯದ ಅಗತ್ಯವಿದೆ




ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ನಡೆದ ಜೆಎಸ್‌ಎಸ್ ಶೈಕ್ಷಣಿಕ ಹಬ್ಬ ಜ್ಞಾನಪರ್ವ–2026 ಕಾರ್ಯಕ್ರಮವನ್ನು ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠರವರು ಉದ್ಘಾಟಿಸಿದರು. (24 ಮಾರ್ಚ್ 2026)

ವಿದ್ಯಾರ್ಥಿಗಳು ಬಹುಮುಖಿ ಚಿಂತನೆ, ತಾಂತ್ರಿಕ ಮತ್ತು ವೈಜ್ಞಾನಿಕ ಮನೋಭಾವ, ನಾಯಕತ್ವ ಗುಣಗಳನ್ನು ಬೆಳೆಸಿಕೊಂಡು ಈ ಸಮಾಜ ಹಾಗೂ ದೇಶಕ್ಕೆ ಆದರ್ಶಪ್ರಾಯರಾಗಬೇಕು. ಇಂದಿನ ಸ್ಪರ್ಧಾತ್ಮಕ ಜಗತ್ತು ವಿದ್ಯಾರ್ಥಿಗಳಲ್ಲಿ ಕ್ರಿಯಾಶೀಲ ಕೌಶಲ್ಯವನ್ನು ಬೇಡುತ್ತದೆ ಎಂದು ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠರವರು ಹೇಳಿದರು.

**ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ** ನಡೆದ ಜೆಎಸ್‌ಎಸ್ ಶೈಕ್ಷಣಿಕ ಹಬ್ಬ ಜ್ಞಾನಪರ್ವ–2026 ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ವಿದ್ಯಾರ್ಥಿಗಳು ಶೈಕ್ಷಣಿಕ ಅವಧಿಯಲ್ಲಿ ಕಲಿಕೆಗೆ ಪೂರಕವಾದ ಬಹುಮುಖಿ ಹವ್ಯಾಸಗಳನ್ನು ಬೆಳೆಸಿಕೊಳ್ಳಬೇಕು. ಪೂರ್ಣವಾಗಿ ಕಲಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರೆ ಮಾತ್ರ ವಿದ್ಯಾರ್ಥಿಗಳಿಗೆ ಯಶಸ್ಸು ಸಾಧ್ಯ. ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನದೇ ಆದ ಪ್ರತಿಭೆಯನ್ನು ಹೊಂದಿರುತ್ತಾನೆ. ಅದನ್ನು ಹೊರಹಾಕುವ ಸೂಕ್ತ ವೇದಿಕೆಗಾಗಿ ಕಾಯುತ್ತಿರುತ್ತಾನೆ. ಅಂತಹವರಿಗೆ ಈ ಕಾರ್ಯಕ್ರಮಗಳು ಸೂಕ್ತ ವೇದಿಕೆಗಳಾಗಬಲ್ಲವು. ವಿದ್ಯಾರ್ಥಿಗಳು ಹಿಂಜರಿಕೆ ಸ್ವಭಾವದಿಂದ ಹೊರಬಂದು ಇಂತಹ ಕಾರ್ಯಕ್ರಮಗಳ ಸದುಪಯೋಗವನ್ನು ಪಡೆದುಕೊಳ್ಳಬೇಕು. ತಮ್ಮ ಗುರಿಗಳೊಂದಿಗೆ ಸೂಕ್ತವಾದ ಕೌಶಲ್ಯಗಳನ್ನು ರೂಢಿಸಿಕೊಂಡಲ್ಲಿ ಮಾತ್ರವೇ ಇಂದು ಗುರಿ ಸಾಧನೆ ಸಾಧ್ಯ. ವಿದ್ಯಾರ್ಥಿಗಳು ಪರಂಪರೆಯ ಸಾಮಾಜಿಕ ಹಾಗೂ ಸಾಂಸ್ಕೃತಿಕ ರಾಯಭಾರಿಗಳು. ಸಮಾಜಮುಖಿ ಅನುಭವಗಳು ಹಾಗೂ ಸಾಂಸ್ಕೃತಿಕ ಅರಿವು ಅವರಿಗೆ ಜೀವನದಲ್ಲಿ ಮುಂದೆ ಸವಾಲುಗಳನ್ನು ಎದುರಿಸುವ ಸಾಮರ್ಥ್ಯಗಳನ್ನು ಬೆಳೆಸುತ್ತದೆ ಎಂದು ನುಡಿದರು.

ಕಾಲೇಜಿನ ಹಿರಿಯ ವಿದ್ಯಾರ್ಥಿ ಹಾಗೂ ಖ್ಯಾತ ಶಿಲ್ಪಿಗಳಾದ ಶ್ರೀ ಅರುಣ್ ಯೋಗಿರಾಜ್‌ರವರು ಮಾತನಾಡಿ ವಿದ್ಯಾರ್ಥಿಗಳ ಗುರಿಯ ದಾರಿಯು ಶ್ರಮದಾಯಕ ಹಾಗೂ ಅನೇಕ ಸವಾಲುಗಳಿಂದ ಕೂಡಿದ್ದರೂ, ಛಲ ಬಿಡದೆ ಮುನ್ನಡೆಯಬೇಕು. ತಮ್ಮ ಆಸಕ್ತಿಗಳಿಗೆ ಅನುಗುಣವಾಗಿ ಬೆಳೆಯಬೇಕು. ತಮಗೆ ಸಿಕ್ಕ ಅವಕಾಶಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕು. ವಿದ್ಯಾರ್ಥಿಗಳಿಗೆ ಸಮಯ ಬಹಳ ಮುಖ್ಯವಾದ ಸಂಪತ್ತು. ಅದನ್ನು ಸದುಪಯೋಗ ಪಡಿಸಿಕೊಳ್ಳಬೇಕು. ದೇಶದ ಅಭಿವೃದ್ಧಿ ಹಾಗೂ ಬೆಳವಣಿಗೆಯಲ್ಲಿ ಯುವ ಜನಾಂಗದ ಪ್ರಾತಿನಿಧ್ಯ ಬಹಳ ಮುಖ್ಯ. ಆಯ್ದುಕೊಂಡ ಮಾರ್ಗ, ವೃತ್ತಿ ಶ್ರದ್ಧೆ ಇಂದು ಎಲ್ಲರೂ ರೂಢಿಸಿಕೊಳ್ಳಬೇಕಾದ ಗುಣ. ಈ ಕಾಲೇಜು ಪಠ್ಯೇತರ ಚಟುವಟಿಕೆಗಳಿಗೆ ಸದಾ ಪ್ರೋತ್ಸಾಹ ನೀಡುತ್ತಾ ಬಂದಿದೆ. ಇಂದಿನ ನನ್ನ ಸಾಧನೆಗೆ ಈ ಪ್ರೋತ್ಸಾಹವೂ ನೆರವಾಗಿದೆ. ಇಂತಹ ಕಾರ್ಯಕ್ರಮಗಳಿಂದ ವಿದ್ಯಾರ್ಥಿಗಳು ತಮ್ಮ ಪ್ರತಿಭೆಗಳನ್ನು ಅನಾವರಣಗೊಳಿಸಲು ಸಾಧ್ಯವಾಗುತ್ತದೆ. ನನ್ನಂತಹ ನೂರಾರು ಸಾಧಕರಿಗೆ ಈ ಕಾಲೇಜು ಪ್ರೇರಣೆ, ಪ್ರೋತ್ಸಾಹಗಳನ್ನು ನೀಡಿ ಬೆಂಬಲಿಸಿದೆ ಎಂದರು.

ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು ಮಾತನಾಡಿ, ಕಾಲೇಜುಗಳಲ್ಲಿ ನಡೆಯುವ ಇಂತಹ ಶೈಕ್ಷಣಿಕ ಹಬ್ಬಗಳಿಗೆ ಒಂದು ಪರಂಪರೆಯಿದೆ. ಹಿಂದಿನ ಗುರುಕುಲ ಶಿಕ್ಷಣ ಪದ್ಧತಿಗಳಲ್ಲಿ ಪಠ್ಯಪೂರಕ ಹಾಗೂ ಪಠ್ಯೇತರ ಚಟುವಟಿಕೆಗಳಾದ ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳಿಗೆ ಪ್ರೋತ್ಸಾಹ ನಿಡಲಾಗುತ್ತಿತ್ತು, ಪಾಶ್ಚಾತ್ಯರಲ್ಲಿ ಇದು ಹತ್ತೊಂಬತ್ತನೆಯ ಶತಮಾನದ ಅಂತ್ಯದಿಂದ ಮುಖ್ಯವಾಗಿ ಕಾಣಿಸಿತು. ಭಾರತದಲ್ಲಿ 1960–70ರ ದಶಕಗಳಲ್ಲಿ, ಮೊದಲು ವಿಶ್ವವಿದ್ಯಾಲಯಗಳ ಮಟ್ಟದಲ್ಲಿ ಇದು ಕಾಣಿಸಿಕೊಂಡು ಅನಂತರದಲ್ಲಿ ಕಾಲೇಜು ಮಟ್ಟಕ್ಕೆ ವ್ಯಾಪಿಸಿತು. ಈ ಶೈಕ್ಷಣಿಕ ಹಬ್ಬಗಳು ಇಂದು ಜಾಗತಿಕ ಮನ್ನಣೆ ಹಾಗೂ ಪ್ರಚಾರ ಪಡೆದುಕೊಳ್ಳುತ್ತಿವೆ. ಮಹಾತ್ಮಾಗಾಂಧಿಯವರು ಶಿಕ್ಷಣ ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾಗಿರಬೇಕೆಂದು ಹೇಳಿದ ಮಾತು ಇಂದಿನ ಬೆಳವಣಿಗೆ ದೃಷ್ಟಿಯಿಂದಲೂ ಸ್ಮರಣಾರ್ಹವಾಗಿದೆ. ಕಾಲೇಜುಗಳಲ್ಲಿನ ಪಠ್ಯಪೂರಕ ಹಾಗೂ ಪಠ್ಯೇತರ ಚಟುವಟಿಕೆಗಳು ರವೀಂದ್ರನಾಥ ಟ್ಯಾಗೋರ್‌ರವರು ಹೇಳುವಂತೆ ವಿದ್ಯಾರ್ಥಿಗಳು ತಮ್ಮದೇ ರೀತಿಯಲ್ಲಿ ಆಲೋಚಿಸಲು ಅವಕಾಶ ನೀಡುವಂತಿರಬೇಕು, ಪಠ್ಯಜ್ಞಾನಕ್ಕೆ ಸೀಮಿತವಾಗಬಾರದು. ಇಂತಹ ಶೈಕ್ಷಣಿಕ ಹಬ್ಬಗಳು ಕಲಾ ವಿಭಾಗದ ವಿದ್ಯಾರ್ಥಿಗಳಿಗೆ ಸೃಜನಶೀಲ ಬೆಳವಣಿಗೆ, ಸಂಸ್ಕೃತಿಯ ಅರಿವು, ಭಾಷಾ ಸಂವಹನದ ಕೌಶಲ, ಆತ್ಮವಿಶ್ವಾಸವನ್ನು ಬೆಳೆಸಿದರೆ, ವಾಣಿಜ್ಯ ವಿದ್ಯಾರ್ಥಿಗಳಿಗೆ ಆರ್ಥಿಕ ಜವಾಬ್ದಾರಿಗಳ ನಿರ್ವಹಣೆಯ ಅರಿವು, ಉದ್ಯಮ ಬೆಳವಣಿಗೆ ಹಾಗೂ ಸವಾಲುಗಳಗಳನ್ನು ಎದುರಿಸುವ ಆತ್ಮಸ್ಥೈರ್ಯವನ್ನು ಬೆಳೆಸುತ್ತವೆ. ವಿಜ್ಞಾನ ವಿದ್ಯಾರ್ಥಿಗಳಲ್ಲಿ ಪಠ್ಯದ ಜ್ಞಾನವನ್ನು ಪ್ರಾಯೋಗಿಕವಾಗಿ ಬಳಸಿಕೊಳ್ಳುವಲ್ಲಿ ನೆರವಾಗುತ್ತವೆ ಎಂದು ಹೇಳಿದರು.

ಪ್ರಾಂಶುಪಾಲರಾದ ಡಾ. ಎಂ. ಪ್ರಭುರವರು ಜ್ಞಾನವಿಲ್ಲದ ಕಾಯಕ ಕೇವಲ ಶ್ರಮವಷ್ಟೇ. ಹಾಗಾಗಿ ಜ್ಞಾನದ ವಿಸ್ತಾರ, ಆಳವಾದ ಅಧ್ಯಯನ, ಪ್ರಾಯೋಗಿಕ ಅನುಭವ ಹೊಸ ಕಲಿಕೆಯಲ್ಲಿ ಕುತೂಹಲ ಬೆಳೆಸಲು ಇಂತಹ ಕಾರ್ಯಕ್ರಮಗಳು ವಿದ್ಯಾರ್ಥಿಗಳಿಗೆ ನೆರವಾಗುತ್ತವೆ. ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಈ ಕಾರ್ಯಕ್ರಮಗಳು ಸಹಕಾರಿಯಾಗಲಿವೆ ಎಂದರು.

ಕಾರ್ಯಕ್ರಮದಲ್ಲಿ ಜ್ಞಾನಪರ್ವ ಕಾರ್ಯಕ್ರಮಗಳ ಸಂಚಾಲಕರು ಹಾಗೂ ಐಕ್ಯುಎಸಿ ಸಂಯೋಜನಾಧಿಕಾರಿಗಳಾದ ಡಾ. ಎನ್. ರಾಜೇಂದ್ರಪ್ರಸಾದ್‌ರವರು ಉಪಸ್ಥಿತರಿದ್ದರು. ಕು. ಅಂಕಿತ ಕುಲಕರ್ಣಿ ಮತ್ತು ತಂಡದವರು ಪ್ರಾರ್ಥಿಸಿದರು. ಕು. ಭವ್ಯಶ್ರೀ ಸ್ವಾಗತಿಸಿದರು. ಕು. ಎಂ. ಪ್ರೀತಿ ವಂದನಾರ್ಪಣೆ ಮಾಡಿದರು. ಜಿ. ಕಿರಣ್ ಕಾರ್ಯಕ್ರಮದ ನಿರೂಪಣೆ ನಡೆಸಿದರು.

## ಮಾನವನ ಉನ್ನತಿ ಮತ್ತು ಸಂತೋಷಕ್ಕೆ ಕಲೆಯೇ ಮುಖ್ಯ ಕಾರಣ




ಮೈಸೂರಿನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಆಯೋಜಿಸಿದ್ದ ರಾಜ್ಯಮಟ್ಟದ ಕಲಾ ಸಂಭ್ರಮ–2026 'ವರ್ಧಿನಿ'ಯ ಸಮಾರೋಪ ಸಮಾರಂಭದಲ್ಲಿ ಜಾನಪದ ವಿದ್ವಾಂಸರಾದ ಡಾ. ಪಿ.ಕೆ. ರಾಜಶೇಖರರವರು ಮಾತನಾಡುತ್ತಿರುವುದು. (24 ಮಾರ್ಚ್ 2026)

ಕಲೆ ಮಾನವನ ಉನ್ನತಿಗೆ ಮತ್ತು ಸಂತೋಷಕ್ಕೆ ಕಾರಣ ಎಂದು ಜಾನಪದ ವಿದ್ವಾಂಸರಾದ ಡಾ. ಪಿ.ಕೆ. ರಾಜಶೇಖರರವರು ಹೇಳಿದರು.

**ಮೈಸೂರಿನ ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನ** ನವಜ್ಯೋತಿ ಸಭಾಂಗಣದಲ್ಲಿ ದಿನಾಂಕ 24.3.2026ರಂದು ಆಯೋಜಿಸಿದ್ದ ರಾಜ್ಯಮಟ್ಟದ ಕಲಾ ಸಂಭ್ರಮ–2026 'ವರ್ಧಿನಿ'ಯ ಸಮಾರೋಪ ಸಮಾರಂಭದಲ್ಲಿ ಮಾತನಾಡುತ್ತಾ ಅವರು ತಿಳಿಸಿದರು. ಕಲೆ ಇಲ್ಲದೆ ಜೀವನವಿಲ್ಲ. ಜೀವನದ ನಿಜವಾದ ಬೇರು ಜಾನಪದ ಮನುಷ್ಯ ಹುಟ್ಟಿನಿಂದ ಸಾಯುವ ತನಕ ಕ್ರಿಯಾಶೀಲತೆ ಮತ್ತು ಕಲಾತ್ಮಕತೆಯಲ್ಲಿ ತೊಡಗಿರುತ್ತಾನೆ. ಜನಪದ ಕಲಾವಿದರು ಪರಂಪರೆಯನ್ನು ರೂಢಿಸಿಕೊಂಡು ಬೆಳೆಸಿದ್ದಾರೆ. ಹೆಣ್ಣು ಸಂಸ್ಕೃತಿಯ ನಿರ್ಮಾತೃ ಎಂದರು. ಜನಪದ ಗೀತೆಯನ್ನು ಹಾಡಿ ಕಲಾ ಸಂಭ್ರಮ ಬಗ್ಗೆ ಸಂತೋಷ ವ್ಯಕ್ತಪಡಿಸಿದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ಸಹಾಯಕ ನಿರ್ದೇಶಕರಾದ ಶ್ರೀ ಬಿ. ನಿರಂಜನಮೂರ್ತಿಯವರು ಕಲಾ ಸಂಭ್ರಮದಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಅಭಿನಂದನೆ ಸಲ್ಲಿಸಿದರು. ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸುವುದು ಮುಖ್ಯ. ಸೋಲು ಗೆಲುವು ನಂತರದ್ದು. ಸೋಲು ಗೆಲುವಿಗೆ ಮೆಟ್ಟಿಲಾಗುತ್ತದೆ ಎಂಬುದನ್ನು ವಿದ್ಯಾರ್ಥಿಗಳು ತಿಳಿಯಬೇಕು ಎಂದು ತಿಳಿಸಿದರು.

ವೇದಿಕೆಯಲ್ಲಿ ಪ್ರಾಂಶುಪಾಲರಾದ ಡಾ. ರೇಚಣ್ಣ, ಸಂಚಾಲಕರಾದ ಶ್ರೀ ಹೊನ್ನಶೆಟ್ಟಿ ಉಪಸ್ಥಿತರಿದ್ದರು. ಕಾಲೇಜಿನ ಸಿಬ್ಬಂದಿವರ್ಗ ಮತ್ತು ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಕು. ಅಮೂಲ್ಯ

'ವರ್ಧಿನಿ 2026' ಫೆಸ್ಟ್‌ನ ವರದಿ ಮಂಡಿಸಿದರು. ಮೈಸೂರಿನ ಮಹಾರಾಜ ಕಾಲೇಜಿಗೆ ಸಮಗ್ರ ಪ್ರಶಸ್ತಿ ದೊರೆಯಿತು. ಕು. ಚಂದನ ಮತ್ತು ತಂಡದವರು ಪ್ರಾರ್ಥಿಸಿದರು. ಕು. ಡಿ.ಎಸ್. ಸಹನ ಸ್ವಾಗತಿಸಿದರು. ಕು. ಎಂ. ಚಂದನ ವಂದಿಸಿದರು. ಕು. ಎಂ.ಎಲ್. ಅಮೂಲ್ಯ ಕಾರ್ಯಕ್ರಮ ನಿರೂಪಿಸಿದರು.

| ಸ್ಪರ್ಧೆಯಲ್ಲಿ ವಿಜೇತರಾದವರು | |
|---|---|
| **ಏಕವ್ಯಕ್ತಿ ನೃತ್ಯ –** ಎಸ್. ಹರ್ಷಿತ, ಮೈಕಾಸ್ ಕಾಲೇಜು, ಮೈಸೂರು<br>ಧೀರಜ್ ಸಿಂಗ್, ಸೆಂಟ್ ಜೋಸೆಫ್ ಕಾಲೇಜು, ಮೈಸೂರು | ಪ್ರಥಮ<br>ದ್ವಿತೀಯ |
| **ಸಮೂಹ ನೃತ್ಯ–** ಲೇಖನ ಮತ್ತು ತಂಡ, ಮಹಾರಾಜ ಕಾಲೇಜು, ಮೈಸೂರು<br>ಜಾನು ಮತ್ತು ತಂಡ, ಜೆಎಸ್‌ಎಸ್ ಸ್ಕೂಲ್ ಆಫ್ ಲೈಫ್ ಸೈನ್ಸಸ್, ಮೈಸೂರು | ಪ್ರಥಮ<br>ದ್ವಿತೀಯ |
| **ಏಕವ್ಯಕ್ತಿ ಗಾಯನ –** ಸಿ. ಯೋಗಶ್ರೀ, ಮಹಾರಾಜ ಕಾಲೇಜು, ಮೈಸೂರು<br>ಕವನಾ ಎಸ್. ಆರಾಧ್ಯ, ಜೆಎಸ್‌ಎಸ್ ದಂತವೈದ್ಯಕೀಯ ಕಾಲೇಜು, ಮೈಸೂರು | ಪ್ರಥಮ<br>ದ್ವಿತೀಯ |
| **ಸಮೂಹಗಾಯನ –** ರುಚಿತ ಮತ್ತು ತಂಡ, ಶೇಷಾದ್ರಿಪುರಂ ಕಾಲೇಜು, ಮೈಸೂರು<br>ಭೂಮಿಕಾ ಮತ್ತು ತಂಡ, ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ಕಾಲೇಜು, ಮೈಸೂರು | ಪ್ರಥಮ<br>ದ್ವಿತೀಯ |
| **ರಂಗೋಲಿ ಸ್ಪರ್ಧೆ –** ಎಸ್. ಸಂಜನಾ, ಎಸ್‌ಡಿಎಂ ಕಾಲೇಜು, ಮೈಸೂರು<br>ಆರ್. ಭಾವನಾ, ಶೇಷಾದ್ರಿಪುರಂ ಪದವಿ ಕಾಲೇಜು, ಮೈಸೂರು | ಪ್ರಥಮ<br>ದ್ವಿತೀಯ |
| **ಸ್ವರಚಿತ ಕವನ ವಾಚನ–**ಕೆ. ನಿಸರ್ಗ, ಎಸ್‌ಡಿಎಂ ಕಾಲೇಜು, ಮೈಸೂರು<br>ಲಾವಣ್ಯ, ಸಂತ ಫಿಲೋಮಿನಾ ಕಾಲೇಜು, ಮೈಸೂರು | ಪ್ರಥಮ<br>ದ್ವಿತೀಯ |
| **ವಾಗ್ವಿಲಾಸ–** ಎ.ಎಸ್. ನಂದೀಶ, ಮಹಾರಾಜ ಕಾಲೇಜು, ಮೈಸೂರು<br>ಎಂ.ಆರ್. ವರ್ಷ, ಎಸ್‌ಡಿಎಂ ಕಾಲೇಜು, ಮೈಸೂರು | ಪ್ರಥಮ<br>ದ್ವಿತೀಯ |
| **ರಸಪಾಕ ಇಂಧನ ರಹಿತ ಅಡುಗೆ –** ಎಂ.ಆರ್. ದೀಪಿಕಾ, ಮಹಾರಾಜ ಕಾಲೇಜು, ಮೈಸೂರು | ಪ್ರಥಮ |



# ಹೆಣ್ಣುಮಕ್ಕಳು ಪೋಷಕರ ಪಾಲಿನ ಶಕ್ತಿಯಾಗಿದ್ದಾರೆ



ಮೈಸೂರಿನ ಊಟಿ ರಸ್ತೆಯ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ನಡೆದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಮೈಸೂರಿನ ಚಾಮರಾಜೇಂದ್ರ ಪ್ರಾಣಿ ಸಂಗ್ರಹಾಲಯದ ಕಾರ್ಯನಿರ್ವಾಹಕ ನಿರ್ದೇಶಕರಾದ ಶ್ರೀಮತಿ ಪಿ. ಅನುಷಾರವರು ಮಾತನಾಡುತ್ತಿರುವುದು. (16 ಮಾರ್ಚ್ 2026)

ಹೆಣ್ಣು ಮಕ್ಕಳು ತಮ್ಮ ಸಾಧನೆಯಿಂದ ಪೋಷಕರಿಗೆ ಶಕ್ತಿಯಾಗಿ ನಿಲ್ಲುತ್ತಿದ್ದಾರೆ ಎಂದು ಮೈಸೂರು ಚಾಮರಾಜೇಂದ್ರ ಪ್ರಾಣಿ ಸಂಗ್ರಹಾಲಯದ ಕಾರ್ಯನಿರ್ವಾಹಕ ನಿರ್ದೇಶಕರಾದ ಶ್ರೀಮತಿ ಪಿ. ಅನುಷಾರವರು ಹೇಳಿದರು.

**ಮೈಸೂರಿನ ಊಟಿ ರಸ್ತೆಯ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ** ದಿನಾಂಕ 16.3.2026ರಂದು ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಮಾತನಾಡುತ್ತಾ ಅವರು ತಿಳಿಸಿದರು. 2026ರಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನ ಎರಡು ಪೂರಕ ಕರೆಗಳನ್ನು ನೀಡುತ್ತಿದೆ. ವಿಶ್ವಸಂಸ್ಥೆಯು 'ಹಕ್ಕುಗಳು, ನ್ಯಾಯ, ಕ್ರಿಯೆ – ಎಲ್ಲಾ ಮಹಿಳೆಯರು ಮತ್ತು ಹೆಣ್ಣು ಮಕ್ಕಳಿಗಾಗಿ' ಎಂಬ ಘೋಷಣೆ ನೀಡಿದರೆ, ಅಧಿಕೃತ ಐಡಬ್ಲುಡಿ ಅಭಿಯಾನವು 'ಪಡೆಯವುದಕ್ಕಾಗಿ ನೀಡಿಕೆ' ಎಂಬ ಘೋಷಣೆ ನೀಡಿದೆ. ಅಂದರೆ, ಈ ಘೋಷಣೆಗಳು ಮಾರ್ಗದರ್ಶನ, ಪಾರದರ್ಶಕತೆ ಮತ್ತು ಅವಕಾಶಗಳ ಮೂಲಕ ಮಹಿಳೆಯರು ಉದ್ಯಮದಲ್ಲಿ ತೊಡಗಿಸಿಕೊಂಡಾಗ ಸಮಾಜ ಪ್ರಯೋಜನ ಪಡೆಯುತ್ತದೆ ಎಂಬ ತತ್ವವನ್ನು ಅವಲಂಬಿಸಿದೆ. ಉತ್ತಮ ಭವಿಷ್ಯಕ್ಕೆ ಯುವ ಪೀಳಿಗೆಯು ತಮ್ಮ ಆಸಕ್ತಿದಾಯಕ ಕ್ಷೇತ್ರವನ್ನು ಆಯ್ದುಕೊಳ್ಳುವುದು ಉತ್ತಮ ಎಂದು ತಿಳಿಸಿದರು.

ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಪ್ರಾಂಶುಪಾಲರಾದ ಡಾ. ಎಂ. ಪ್ರಭುರವರು ಸ್ವಾಗತಿಸಿದರು. ಎಂಸಿಎ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಶ್ರೀಮತಿ ಶ್ವೇತಾ ಪ್ರಾರ್ಥಿಸಿದರು. ಮಹಿಳಾ ಸಮಿತಿಯ ಸದಸ್ಯರಾದ ಡಾ. ರಮ್ಯಶ್ರೀ ಸಮಿತಿಯ ಚಟುವಟಿಕೆಗಳ ವರದಿ ಮಂಡಿಸಿದರು. ಮಹಿಳಾ ಸಮಿತಿಯ ಸಂಚಾಲಕರಾದ ಡಾ. ಕುಮುದಿನಿ ಅಚ್ಚಿ ವಂದಿಸಿದರು. ಸದಸ್ಯರಾದ ಶ್ರೀಮತಿ ಮೀರಾ ಕಾರ್ಯಕ್ರಮ ನಿರೂಪಿಸಿದರು.

# ವೈಜ್ಞಾನಿಕ ಆವಿಷ್ಕಾರಗಳು ಮತ್ತು ಸುಸ್ಥಿರ ಅಭಿವೃದ್ಧಿಗೆ ರಸಾಯನ ವಿಜ್ಞಾನದ ಪಾತ್ರ ಅಪಾರ



ಮೈಸೂರಿನ ಊಟಿ ರಸ್ತೆಯ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ನಡೆದ "ಕರೆಂಟ್ ಟ್ರೆಂಡ್ಸ್ ಅಂಡ್ ಫ್ಯೂಚರ್ ಆಪರ್ಚುನಿಟೀಸ್ ಇನ್ ಕೆಮಿಕಲ್ ಸೈನ್ಸಸ್" ರಾಷ್ಟ್ರೀಯ ಸಮ್ಮೇಳನವನ್ನು ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ಕುಲಪತಿಗಳಾದ ಪ್ರೊ. ಕೆ.ಎಸ್. ರಂಗಪ್ಪನವರು ಉದ್ಘಾಟಿಸಿದರು. (13 ಮಾರ್ಚ್ 2026)

ವೈಜ್ಞಾನಿಕ ವಿಷಯಗಳ ಮೇಲಿನ ಸಮ್ಮೇಳನಗಳು ಆವಿಷ್ಕಾರಗಳ ಬಗ್ಗೆ ಚರ್ಚಿಸಲು ಹಾಗೂ ಹೊಸ ಒಡಂಬಡಿಕೆಗಳಿಗೆ ಪ್ರೇರಣೆ ನೀಡಲು ಮಹತ್ವವಾದ ವೇದಿಕೆಯನ್ನು ಒದಗಿಸುತ್ತವೆ. ಇಂತಹ ಅರ್ಥಪೂರ್ಣ ಶೈಕ್ಷಣಿಕ ಕಾರ್ಯಕ್ರಮಗಳನ್ನು ಆಯೋಜಿಸುವಲ್ಲಿ ಜೆಎಸ್‌ಎಸ್ ಸಂಸ್ಥೆಗಳ ಪಾತ್ರ ಶ್ಲಾಘನೀಯ ಎಂದು ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿಗಳು ಹಾಗೂ ಖ್ಯಾತ ವಿಜ್ಞಾನಿಗಳು ಆದ ಪ್ರೊ. ಕೆ.ಎಸ್. ರಂಗಪ್ಪನವರು ಹೇಳಿದರು.

**ಮೈಸೂರಿನ ಊಟಿ ರಸ್ತೆಯ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ** ಐಕ್ಯೂಎಸಿ ಮತ್ತು ಸ್ನಾತಕೋತ್ತರ ರಸಾಯನಶಾಸ್ತ್ರ ವಿಭಾಗದ ವತಿಯಿಂದ "ಕರೆಂಟ್ ಟ್ರೆಂಡ್ಸ್ ಅಂಡ್ ಫ್ಯೂಚರ್ ಆಪರ್ಚುನಿಟೀಸ್ ಇನ್ ಕೆಮಿಕಲ್ ಸೈನ್ಸಸ್" ಎಂಬ ವಿಷಯದ ಮೇಲೆ ಆಯೋಜಿಸಿದ್ದ ಎರಡು ದಿನಗಳ ರಾಷ್ಟ್ರೀಯ ಸಮ್ಮೇಳನವನ್ನು ದಿನಾಂಕ 13.3.2026ರಂದು ಉದ್ಘಾಟಿಸಿ ಅವರು ಮಾತನಾಡಿದರು. ರಸಾಯನ ವಿಜ್ಞಾನವು ಅಣು ಜೀವಶಾಸ್ತ್ರ, ಪದಾರ್ಥ ವಿಜ್ಞಾನ, ಪರಿಸರ ಅಧ್ಯಯನ, ಔಷಧೀಯ ಆವಿಷ್ಕಾರಗಳು ಹಾಗೂ ಇನ್ನಿತರೆ ಕ್ಷೇತ್ರಗಳಿಗೆ ಕೇಂದ್ರೀಯ ಸ್ಥಾನಮಾನವನ್ನು ಹೊಂದಿದೆ. ಅಣು ಮಟ್ಟದಲ್ಲಿ ರಸಾಯನ ವಿಜ್ಞಾನದ ಜ್ಞಾನ ಬಳಸಿ ನಡೆಸಬಹುದಾದ ಪದಾರ್ಥಗಳ ಅಧ್ಯಯನವು ಔಷಧೀಯ ಆವಿಷ್ಕಾರಗಳು, ವಸ್ತು ವಿಶ್ಲೇಷಣೆ ಹಾಗೂ ವಿವಿಧ ಆಧುನಿಕ ಅನ್ವಯಿಕೆಗಳ ಅಭಿವೃದ್ಧಿಗೆ ಅತ್ಯಂತ ಮೂಲಭೂತವೂ ಹಾಗೂ ಉಪಯುಕ್ತವೂ ಆಗಿದೆ. ರಾಸಾಯನಿಕ ವಿಜ್ಞಾನದಲ್ಲಿ ನಡೆಯುತ್ತಿರುವ ಇತ್ತೀಚಿನ ಸಂಶೋಧನೆಗಳು

ಜೈವಿಕ ಅಣುಗಳ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ. ಇವು ವೈಜ್ಞಾನಿಕ ಸಂಶೋಧನೆಗೆ ಉತ್ತಮ ವೇದಿಕೆಗಳನ್ನು ಒದಗಿಸುತ್ತಿವೆ ಎಂದರು.

ವೈಜ್ಞಾನಿಕ ಆವಿಷ್ಕಾರಗಳು ಮತ್ತು ಸುಸ್ಥಿರ ಅಭಿವೃದ್ಧಿಗೆ ರಸಾಯನ ವಿಜ್ಞಾನದ ಮಹತ್ವ ಅಪಾರ. ಭವಿಷ್ಯದ ರಸಾಯನಿಕ ವಿಜ್ಞಾನವು ಸ್ಥಿರತೆಯ ತತ್ವಗಳಿಗೆ ಹಾಗೂ ಶುದ್ಧ ಶಕ್ತಿಯ ಮೂಲಗಳ ಅಭಿವೃದ್ಧಿಗೆ ಕೊಡುಗೆಗಳನ್ನು ನೀಡಬೇಕಿದೆ. ರಸಾಯನಶಾಸ್ತ್ರವು ಕೃತಕ ಬುದ್ಧಿಮತ್ತೆ, ದತ್ತಾಂಶ ವಿಜ್ಞಾನ ಹಾಗೂ ಇತರೆ ಮುಂತಾದ ಕ್ಷೇತ್ರಗಳೊಂದಿಗೆ ಹೆಚ್ಚಾಗಿ ಸಂಯೋಜನೆಯಾಗುತ್ತಿದೆ ಮತ್ತು ಅವುಗಳಿಂದ ಸದುಪಯೋಗವೂ ಇದೆ. ಅರ್ಥಪೂರ್ಣ ಹಾಗೂ ಗುಣಮಟ್ಟದ ಸಂಶೋಧನಾ ಫಲಿತಾಂಶಗಳನ್ನು ಸಾಧಿಸಲು ಸಂಶೋಧಕರು ಮತ್ತು ವಿಜ್ಞಾನಿಗಳು ಒಡಂಬಡಿಕೆಗಳ ಮೂಲಕ ಸಹಕಾರದ ಮನೋಭಾವದಿಂದ ಕಾರ್ಯ ನಿರ್ವಹಿಸಬೇಕು ಎಂದು ಕರೆ ನೀಡಿದರು.

ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು ಮಾತನಾಡಿ, ವಿಶ್ಲೇಷಣಾತ್ಮಕ ಅಭಿವೃದ್ಧಿ, ಔಷಧ ಸಂಶೋಧನೆ ಮತ್ತು ಆವಿಷ್ಕಾರ, ಜೈವಿಕ- ಸಾವಯವ ಮತ್ತು ನಿರವಯವ ರಸಾಯನಶಾಸ್ತ್ರ, ಪಾಲಿಮರ್ ವಿಜ್ಞಾನ ಹಾಗೂ ಪದಾರ್ಥ ವಿಜ್ಞಾನ ಮುಂತಾದ ಅಂತರಶಿಸ್ತೀಯ ಕ್ಷೇತ್ರಗಳಲ್ಲಿ ಲಭ್ಯವಿರುವ ಅವಕಾಶಗಳನ್ನು ಸದುಪಯೋಗಪಡಿಸಿಕೊಂಡರೆ ಉತ್ತಮ ಸಂಶೋಧನಾ ಫಲಿತಾಂಶಗಳನ್ನು ಪಡೆಯಬಹುದು. ಸಂಶೋಧನಾ ತಂತ್ರಗಳು ವಿಜ್ಞಾನದಲ್ಲಿ ಹೊಸ ಅವಕಾಶಗಳನ್ನು ಒದಗಿಸುತ್ತವೆ. ನವನವೀನ ಯೋಜನೆಗಳೊಂದಿಗೆ ಜ್ಞಾನವನ್ನು ಪಡೆದು ಸಂಶೋಧನೆಯಲ್ಲಿ ತೊಡಗಬೇಕು. ವಿಜ್ಞಾನ ಕ್ಷೇತ್ರಕ್ಕೆ ಅರ್ಥಪೂರ್ಣ ಕೊಡುಗೆ ನೀಡಲು ರಸಾಯನಶಾಸ್ತ್ರಜ್ಞರು ವ್ಯವಸ್ಥಿತವಾದ ಕ್ರಮಗಳನ್ನು ಅನುಷ್ಠಾನಕ್ಕೆ ತರಬೇಕು ಎಂದು ತಿಳಿಸಿದರು.

ದೇಶದ ವಿವಿಧ ಭಾಗಗಳಿಂದ ವಿದ್ಯಾರ್ಥಿಗಳು, ಸಂಶೋಧನಾ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರನ್ನು ಒಳಗೊಂಡಂತೆ ಒಟ್ಟು 202 ಮಂದಿ ಈ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ವಿವಿಧ ಸಂಶೋಧನಾ ಲೇಖನಗಳನ್ನು ಮೌಖಿಕ ಹಾಗೂ ಪೋಸ್ಟರ್ ಪ್ರಸ್ತುತಿಗಳ ಮೂಲಕ ಪ್ರದರ್ಶಿಸಲಾಯಿತು. ವಿವಿಧ ಸಂಪನ್ಮೂಲ ವ್ಯಕ್ತಿಗಳು ರಸಾಯನ ವಿಜ್ಞಾನ ಕ್ಷೇತ್ರದಲ್ಲಿ ನಡೆಯುತ್ತಿರುವ ಅಭಿವೃದ್ಧಿಗಳ ಕುರಿತು ಉಪನ್ಯಾಸಗಳನ್ನು ನೀಡಿದರು.

ಪ್ರಾಂಶುಪಾಲರಾದ ಡಾ. ಎಂ. ಪ್ರಭು ಸ್ವಾಗತಿಸಿದರು. ಕು. ಅಂಕಿತಾ ಕುಲಕರ್ಣಿ ವಂದಿಸಿದರು. ಕು. ಎಂ. ಪ್ರೀತಿ ನಂದೂರು ಕಾರ್ಯಕ್ರಮ ನಿರೂಪಿಸಿದರು. ಸಂಚಾಲಕರುಗಳಾದ ಡಾ, ಮಲ್ಲೇಶ, ಡಾ ರಾಜೇಂದ್ರಪ್ರಸಾದ್ ಹಾಗೂ ಸಂಘಟನಾ ಕಾರ್ಯದರ್ಶಿಗಳಾದ ಡಾ. ಕಾವ್ಯ ಹಾಗೂ ಡಾ. ಪುಷ್ಪಾಂಜಲಿ ಸಮಾರಂಭದಲ್ಲಿ ಉಪಸ್ಥಿತರಿದ್ದರು.


**ಮಾಸಿಕ ಸಾಮೂಹಿಕ ವಿವಾಹ 2026**
**ಸುತ್ತೂರು ಶ್ರೀಕ್ಷೇತ್ರ**

**ಜೂನ್ 18 ಗುರುವಾರ**

**ವಿವರಗಳಿಗೆ ಸಂಪರ್ಕಿಸಿ :**
**ಆಡಳಿತಾಧಿಕಾರಿಗಳು**
**ಜೆಎಸ್‌ಎಸ್ ಸಂಸ್ಥೆಗಳು, ಸುತ್ತೂರು**
**ದೂರವಾಣಿ : 08221-232223, 232224**

## ಮಹಿಳೆಯರು ಸಮಾಜದ ಅಭಿವೃದ್ಧಿಯಲ್ಲಿ ಮಹಿಳೆಯರ ಪ್ರಮುಖವಾದ ಪಾತ್ರ




ಕೊಳ್ಳೇಗಾಲದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಯಮಿ ಶ್ರೀಮತಿ ಪಲಾಶ್ ಬಿದ್ದಪ್ಪನವರು ಉದ್ಘಾಟಿಸಿ ಮಾತನಾಡುತ್ತಿರುವುದು. (9 ಮಾರ್ಚ್ 2026)

ಮಹಿಳೆಯರು ಕುಟುಂಬದ ಅಭಿವೃದ್ಧಿಯ ಜೊತೆಗೆ ಸಮಾಜದ ಅಭಿವೃದ್ಧಿಯಲ್ಲೂ ಪ್ರಮುಖವಾದ ಪಾತ್ರವಹಿಸುತ್ತಾರೆ. ಇಂದಿನ ಮಹಿಳೆಯರು ಶಿಕ್ಷಣ, ವಿಜ್ಞಾನ, ತಂತ್ರಜ್ಞಾನ, ಕ್ರೀಡೆ, ರಾಜಕೀಯ ಹಾಗೂ ಉದ್ಯಮ ಸೇರಿದಂತೆ ಅನೇಕ ಕ್ಷೇತ್ರಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿದ್ದಾರೆ ಎಂದು ಮೈಸೂರಿನ ಕ್ಲೋಸೆಟ್‌ನ ಮಾಲೀಕರಾದ ಉದ್ಯಮಿ ಶ್ರೀಮತಿ ಪಲಾಶ್ ಬಿದ್ದಪ್ಪನವರು ಹೇಳಿದರು.

**ಕೊಳ್ಳೇಗಾಲದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ** ಹಿರಿಯ ವಿದ್ಯಾರ್ಥಿನಿಯರ ವೇದಿಕೆ ವತಿಯಿಂದ ದಿನಾಂಕ 9.3.2026ರಂದು ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ವಿದ್ಯಾರ್ಥಿನಿಯರು ಉತ್ತಮ ಶಿಕ್ಷಣ ಪಡೆದು ತಮ್ಮ ಪ್ರತಿಭೆಯನ್ನು ವೃದ್ಧಿಸಿಕೊಳ್ಳಬೇಕು. ಸಮಾಜದ ಅಭಿವೃದ್ಧಿಗೆ ಕೊಡುಗೆ ನೀಡಬೇಕು. ಮಹಿಳಾ ಸಬಲೀಕರಣವು ಸಮಾಜದ ಸಮಗ್ರ ಅಭಿವೃದ್ಧಿಗೆ ಅತ್ಯಂತ ಅಗತ್ಯವಾಗಿದ್ದು, ಮಹಿಳೆಯರಿಗೆ ಸಮಾನ ಅವಕಾಶಗಳನ್ನು ನೀಡುವುದು ಎಲ್ಲರ ಜವಾಬ್ದಾರಿಯಾಗಿದೆ ಎಂದರು.

2024-25ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಬಿ.ಎ. ಪದವಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕಗಳಿಸಿ 106ನೆಯ ಘಟಿಕೋತ್ಸವದಲ್ಲಿ ಒಂದು ಚಿನ್ನದ ಪದಕ ಹಾಗೂ ಎರಡು ನಗದು ಬಹುಮಾನ ಪಡೆದ ಕು. ಬಿ ಚಂದನಾರವರನ್ನು ಸನ್ಮಾನಿಸಲಾಯಿತು.

ಪ್ರಾಂಶುಪಾಲರಾದ ಡಾ. ಹೆಚ್.ಎಸ್. ಕೊಂಗಳಪ್ಪನವರು ಮಾತನಾಡಿ, ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯು ಮಹಿಳೆಯರ ಮಹತ್ವವನ್ನು ಸಾರುವ, ಅವರ ಎಲ್ಲಾ ಶ್ರಮ ಮತ್ತು ಪ್ರಯತ್ನಗಳಿಗೆ ಮೆಚ್ಚುಗೆಯನ್ನು ಸೂಚಿಸುವ ದಿನವಾಗಿದೆ. ಸಮಾನತೆಯ ಜೊತೆಗೆ ಮಹಿಳೆಯರು ಇಂದು ಎಲ್ಲಾ ಕ್ಷೇತ್ರಗಳಲ್ಲಿಯೂ ಮುಂದಿರುವುದು ದೇಶದ ಆರ್ಥಿಕ ಅಭಿವೃದ್ಧಿಗೆ ಸಾಕಷ್ಟು ಅನುಕೂಲವಾಗಲಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಹಿರಿಯ ವಿದ್ಯಾರ್ಥಿನಿ ವೇದಿಕೆಯ ಸಂಚಾಲಕರಾದ ಶ್ರೀಮತಿ ಎನ್. ವಾಣಿಯವರು ಉಪಸ್ಥಿತರಿದ್ದರು.

# ಅರಿವೆಂಬ ಗುರುವಿನ ಸಂಸ್ಮರಣೆ



ನಂಜನಗೂಡಿನ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ನಡೆದ ಪ್ರೊ. ಮಲೆಯೂರು ಗುರುಸ್ವಾಮಿ ಸಂಸ್ಮರಣೆ ಕಾರ್ಯಕ್ರಮದಲ್ಲಿ ಪ್ರೊ. ನೀಲಗಿರಿ ಎಂ. ತಳವಾರರವರು ಮಾತನಾಡುತ್ತಿರುವುದು. (11 ಮಾರ್ಚ್ 2026)

**ನಂಜನಗೂಡಿನ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ** ಪ್ರೊ. ಮಲೆಯೂರು ಗುರುಸ್ವಾಮಿ ಪ್ರತಿಷ್ಠಾನ ಹಾಗೂ ರಂಗತರಂಗ ಟ್ರಸ್ಟ್ ಸಹಯೋಗದಲ್ಲಿ ದಿನಾಂಕ 11.3.2026 ರಂದು ಪ್ರೊ. ಮಲೆಯೂರು ಗುರುಸ್ವಾಮಿ ಸಂಸ್ಮರಣೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಮೈಸೂರಿನ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಯೋಜನಾ ನಿರ್ದೇಶಕರಾದ ಪ್ರೊ. ನೀಲಗಿರಿ ಎಂ. ತಳವಾರರವರು ಮಾತನಾಡಿ, ಶ್ರೇಷ್ಠ ವ್ಯಕ್ತಿಗಳ ಸ್ಮರಣೆ ಸಮಾಜದ ಒಂದು ಮೌಲಿಕ ವಿಚಾರವಾಗಿದೆ. ಪ್ರೊ. ಮಲೆಯೂರು ಗುರುಸ್ವಾಮಿ ಐತಿಹಾಸಿಕ ಗ್ರಾಮ ಮಲೆಯೂರಿನ ಮಗನಾಗಿ ಪ್ರತಿಷ್ಠಿತ ಜೆಎಸ್‌ಎಸ್ ಸಂಸ್ಥೆಗಳಲ್ಲಿ ಪ್ರಾಧ್ಯಾಪಕರಾಗಿ ಸುದೀರ್ಘ ಅವಧಿಯವರೆಗೆ ಸೇವೆ ಸಲ್ಲಿಸಿದವರು. ಜ್ಞಾನವನ್ನರಸಿ ಬಂದ ಬಡ ವಿದ್ಯಾರ್ಥಿಗಳಿಗೆ ತಮ್ಮ ಸರಳತೆ, ಸಜ್ಜನಿಕೆ ಮೂಲಕ ಹತ್ತಿರವಾಗುತ್ತಿದ್ದರು. ಬದುಕಿಗೆ ಪೂರಕವಾಗುವ ಜ್ಞಾನಾಧಾರಿತ ಬರವಣಿಗೆಗಳ ಮುಖೇನ ಎಲ್ಲ ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ಗುರುಗಳಾಗಿ ಜನಮಾನಸದಲ್ಲಿ ಉಳಿದಿರುವುದು ಇವರ ಜೀವನದ ಮೌಲ್ಯ ಮತ್ತು ನೈಜತೆಯನ್ನು ಬಿಂಬಿಸುತ್ತದೆ. ಮಲೆಯೂರು ಗುರುಸ್ವಾಮಿಯವರು ಸಾರ್ವಕಾಲಿಕ ಕೀರ್ತಿಶಾಲಿಗಳಾಗಿ ವಾಸ್ತವದಲ್ಲಿ ಬದುಕಿದವರು ಎಂದು ತಿಳಿಸಿದರು.

ರಂಗತರಂಗ ಟ್ರಸ್ಟ್‌ನ ಅಧ್ಯಕ್ಷರಾದ ಶ್ರೀ ಸೋಮಶೇಖರ ಬಿಸಲ್ವಾಡಿಯವರು ಮಾತನಾಡಿ, ಪ್ರೊ. ಮಲೆಯೂರು ಗುರುಸ್ವಾಮಿಯವರು ನೇರನುಡಿಯ ವ್ಯಕ್ತಿತ್ವದವರು. ನೂರಾರು ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡಿ ವಿದ್ಯಾದಾನ ಮಾಡಿದವರು. ವಿಶಾಲ ಹೃದಯದಿಂದ ವಿದ್ಯಾರ್ಥಿಗಳ ಬದುಕನ್ನು ಬೆಳಗಿದವರು. ಮುಳ್ಳೂರು ನಾಗರಾಜು, ದೇವಯ್ಯ ಹರವೆ ಇವರ ಶಿಷ್ಯತ್ವದಿಂದ ಬೆಳೆದು ಹೆಮ್ಮರವಾದವರು, ವ್ಯಕ್ತಿಯಿಂದ ವ್ಯಕ್ತಿತ್ವವಾಗಿ ಶಿಕ್ಷಣ ಸಂಪತ್ತನ್ನು ವಿದ್ಯಾರ್ಥಿಗಳಿಗೆ ಧಾರೆಯೆರೆದ ಕೀರ್ತಿ ದಿವಂಗತ ಮಲೆಯೂರು ಗುರುಸ್ವಾಮಿಯವರಿಗೆ ಸಲ್ಲುತ್ತದೆ. ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ, ಯಾರಿಗೂ ಭೇದ ಭಾವ ಮಾಡದೇ ಸರ್ವರಿಗೂ ಬೇಕಾದವರಾಗಿ ಬದುಕನ್ನು ಬದುಕಿಗೇ ಅರ್ಪಿಸಿದ ಶ್ರೇಷ್ಠ ಚಿಂತಕರು ಎಂದು ಪರಿಭಾವಿಸಬೇಕು ಎಂದರು.

ಹರವೆಯ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ಎಂ.ಆರ್. ಸವಿತಾರವರು ಮಾತನಾಡುತ್ತಾ ಪ್ರೊ. ಮಲೆಯೂರು ಗುರುಸ್ವಾಮಿಯವರು ಗುರುವೂ ಹೌದು ಸ್ವಾಮಿಯೂ ಹೌದು. ಅಂಕಿತವೇ ಅನ್ವರ್ಥವೆಂಬಂತೆ ಬೆಳೆದ ಅವರು ವಿದ್ಯಾರ್ಥಿಗಳನ್ನು ಸಮಾಜದ, ನಾಡಿನ ಹಾಗೂ ದೇಶದ ಸತ್ಪ್ರಜೆಗಳನ್ನಾಗಿ ರೂಪಿಸಬೇಕೆಂಬ ಕನಸ್ಸನ್ನು ಹೊಂದಿದ್ದವರು. ಸರ್ವರನ್ನೂ ಪ್ರೀತಿಸಿ ಹಾಗೂ ಪ್ರೀತಿಸಲ್ಪಟ್ಟು ಅರ್ಥಪೂರ್ಣವಾದ ಬದುಕನ್ನು ಸಾಗಿಸಿದವರು. ಶ್ರೀಯುತರ ಬದುಕು, ಬರಹ, ಸಾಧನೆ ಸಾರ್ಥಕವಾದುದು ಎಂದರು.

ಶ್ರೀ ಕೆ.ಎನ್. ಶಿವಕುಮಾರ್ ಹಾಗೂ ಶ್ರೀ ಉಮಾಕಾಂತ್‌ರವರು ಪ್ರೊ. ಮಲೆಯೂರು ಗುರುಸ್ವಾಮಿಯವರ ಸಾಹಿತ್ಯಕ ವಿಚಾರಧಾರೆಯ ಬಗ್ಗೆ ತಮ್ಮ ಅನುಭವಗಳನ್ನು ಹಂಚಿಕೊಂಡರು. ಪ್ರಾಂಶುಪಾಲರಾದ ಡಾ. ಸಿ.ಎಸ್. ಹೊನ್ನೇಗೌಡರವರು ಕಲಿಕೆ ನಿತ್ಯಂ-ನಿರಂತರಂ ಎಂಬ ಉಕ್ತಿಯಂತೆ ತಮ್ಮ ವಿಚಾರವನ್ನು ಸಮರ್ಥವಾಗಿ ಮಂಡಿಸುವ ಪಾಂಡಿತ್ಯವನ್ನು ಕರಗತ ಮಾಡಿಕೊಂಡಿದ್ದ ಪ್ರೊ. ಮಲೆಯೂರು ಗುರುಸ್ವಾಮಿಯವರು ಗುರು-ಶಿಷ್ಯ ಪರಂಪರೆಯ ಕಲಿಕೆಯನ್ನು ಸಾರ್ವಕಾಲಿಕ ಸತ್ಯವನ್ನಾಗಿ ಉಳಿಸಿದ್ದಾರೆ ಎಂದರು.

ಕಾಲೇಜಿನ ಕಛೇರಿ ಅಧೀಕ್ಷಕರಾದ ಶ್ರೀ ಕೆ.ವಿ. ಸುಂದರರಾಜು, ಅಧ್ಯಾಪಕ, ಅಧ್ಯಾಪಕೇತರರು ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ತೃತೀಯ ಬಿ.ಎಸ್ಸಿ ವಿದ್ಯಾರ್ಥಿನಿ ಕು. ಸ್ನೇಹ ಪ್ರಾರ್ಥಿಸಿದರು. ಹಿಂದಿ ವಿಭಾಗದ ಮುಖ್ಯಸ್ಥರಾದ ಡಾ. ಮೋಹನ್ ಸಿಂಗ್ ಸ್ವಾಗತಿಸಿದರು. ಇತಿಹಾಸ ವಿಭಾಗದ ಮುಖ್ಯಸ್ಥರಾದ ಶ್ರೀ ಎನ್. ಮಂಜಪ್ಪ ವಂದಿಸಿದರು ಹಾಗೂ ಕನ್ನಡ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಎಂ.ಎನ್. ಜಯಶೀಲ ಕಾರ್ಯಕ್ರಮ ನಿರೂಪಿಸಿದರು.

---

## ಅರಣ್ಯ ಸಿಬ್ಬಂದಿ ಹಾಗೂ ರೈತರಿಗೆ ಕಾರ್ಯಾಗಾರ

**ಸುತ್ತೂರು ಐಸಿಎಆರ್ ಜೆಎಸ್ಎಸ್ ಕೃಷಿ ವಿಜ್ಞಾನ ಕೇಂದ್ರ**, ಕರ್ನಾಟಕ ಅರಣ್ಯ ಇಲಾಖೆಯ ಸಂಯುಕ್ತಾಶ್ರಯದಲ್ಲಿ ದಿನಾಂಕ 23.3.2026ರಿಂದ 25.3.2026ರವರೆಗೆ ಮೂರು ದಿನಗಳ ಕೃಷಿ ಅರಣ್ಯ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು.

ಮೈಸೂರು ವೃತ್ತದ ಅರಣ್ಯ ಸಂರಕ್ಷಣಾಧಿಕಾರಿಗಳಾದ ಡಾ. ಎಸ್.ಎಸ್. ರವಿಶಂಕರ್‌ರವರು ಕಾರ್ಯಕ್ರಮ ಉದ್ಘಾಟಿಸಿ ಅರಣ್ಯಾಧಾರಿತ ಕೃಷಿ, ಅರಣ್ಯ ಸಂರಕ್ಷಣೆ ಹಾಗೂ ಸುಸ್ಥಿರ ಕೃಷಿಗಾಗಿ ಅರಣ್ಯ ಕೃಷಿಯ ಪ್ರಾಮುಖ್ಯತೆ ಅರಣ್ಯಾಧಿಕಾರಿಗಳು ಹಾಗೂ ಕಾಡಂಚಿನ ರೈತರ ಪಾತ್ರ ಕುರಿತು ಮಾಹಿತಿ ನೀಡಿದರು.

ಡಾ. ಬಿ.ಎನ್. ಜ್ಞಾನೇಶ್‌ರವರು ಮೈಸೂರು ಜಿಲ್ಲೆಯ ಭೌಗೋಳಿಕ ಹಿನ್ನೆಲೆಯುಳ್ಳ ಬೆಳೆಗಳ ಕುರಿತು ಮಾಹಿತಿ ನೀಡುವುದರ ಜೊತೆಗೆ ಮಾನವ ಹಾಗೂ ಕಾಡು ಪ್ರಾಣಿಗಳ ನಡುವೆ ನಡೆಯುತ್ತಿರುವ ಸಂಘರ್ಷ ಜಾಗತಿಕ ತಾಪಮಾನದಲ್ಲಿ ಆಗುತ್ತಿರುವ ಬದಲಾವಣೆಗಳು ಇತ್ಯಾದಿ ವಿಷಯಗಳ ಬಗ್ಗೆ ತಿಳಿಸಿದರು. ಸಾವಯವ ಕೃಷಿಗೆ ಒತ್ತುನೀಡುವುದು. ಉಪ ಅರಣ್ಯಸಂರಕ್ಷಣಾಧಿಕಾರಿಗಳಾದ ಶ್ರೀ ಕೆ. ಪರಮೇಶ್‌ರವರು ಕೃಷಿ ಅರಣ್ಯದ ಮಹತ್ವ, ಪರಿಸರ ಸಂರಕ್ಷಣೆ ಮತ್ತು ಅರಣ್ಯ ಕೃಷಿಯಿಂದ ಆಗುವ ಲಾಭಗಳನ್ನು ಕುರಿತು ಮಾಹಿತಿ ನೀಡಿದರು.

ಉಪ ಅರಣ್ಯ ಸಂರಕ್ಷಣಾಧಿಕಾರಿಗಳಾದ ಶ್ರೀ ಶಂಕರೇಗೌಡರು ಕೃಷಿಯಲ್ಲಿ ನೂತನ ತಾಂತ್ರಿಕತೆಗಳು ಹಾಗೂ ಮೌಲ್ಯವರ್ಧನೆ ಕುರಿತು ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ರೈತರು ಹಾಗೂ ಅರಣ್ಯ ಸಿಬ್ಬಂದಿವರ್ಗದವರು ಭಾಗವಹಿಸಿದ್ದರು.

# ಯುವಜನಾಂಗಕ್ಕೆ ಸೇವಾ ಮನೋಭಾವನೆ ಅವಶ್ಯಕ




**ನಂಜನಗೂಡಿನ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು** ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ರಾಷ್ಟ್ರೀಯ ಸೇವಾಯೋಜನಾ ಘಟಕಗಳ ಸಹಯೋಗದಲ್ಲಿ ನಂಜನಗೂಡು ತಾಲ್ಲೂಕು ಅಳಗಂಚಿಪುರ ಗ್ರಾಮದಲ್ಲಿ ದಿನಾಂಕ 9.3.2026ರಂದು ರಾಷ್ಟ್ರೀಯ ಸೇವಾಯೋಜನೆಯ ಏಳು ದಿನಗಳ ವಾರ್ಷಿಕ ವಿಶೇಷ ಶಿಬಿರಕ್ಕೆ ಚಾಲನೆ ನೀಡಲಾಯಿತು. ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ಕೆ. ವೀರಣ್ಣನವರು ಮಾತನಾಡಿ ದೇಶದ ಪ್ರಥಮ ಪ್ರಧಾನಿ ಜವಾಹರಲಾಲ್ ನೆಹರು ಸ್ಥಾಪಿಸಿದ ರಾಷ್ಟ್ರೀಯ ಸೇವಾಯೋಜನೆ ಘಟಕ ಪರಿಕಲ್ಪನೆ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಸಾಮಾಜಿಕ ಪರಿಕಲ್ಪನೆಗೆ ಅನುಗುಣವಾಗಿದೆ. ವಿದ್ಯಾರ್ಥಿಗಳು ರಾಷ್ಟ್ರೀಯ ಸೇವಾಯೋಜನಾ ಘಟಕಗಳಲ್ಲಿ ಸೇವಾ ಭಾವನೆಯೊಂದಿಗೆ ಭಾಗವಹಿಸಬೇಕು. ಗ್ರಾಮ, ರಾಜ್ಯ ಹಾಗೂ ರಾಷ್ಟ್ರದ ಅಭಿವೃದ್ಧಿಯತ್ತ ಚಿಂತಿಸಿಸಬೇಕು. ಶಿಬಿರದ ಅವಧಿಯಲ್ಲಿ ಪರಿಶ್ರಮಕ್ಕೆ ಒತ್ತು ನೀಡಿ ಶಿಬಿರದ ಉದ್ದೇಶಿತ ಕಾರ್ಯ ಯೋಜನೆಗಳನ್ನು ಅನುಷ್ಠಾನಕ್ಕೆ ತರುವಲ್ಲಿ ಪ್ರಯತ್ನಶೀಲರಾಗಿ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕು ಎಂದರು.

ಅಳಗಂಚಿಪುರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕರಾದ ಶ್ರೀ ಮಹದೇವರವರು ಮಾತನಾಡಿ, ರಾಷ್ಟ್ರೀಯ ಸೇವಾಯೋಜನಾ ಘಟಕದಲ್ಲಿ ಸೇವೆ ಸಲ್ಲಿಸುವ ಸ್ವಯಂಸೇವಕರು ಸಮುದಾಯ ಸೇವೆ, ಆರೋಗ್ಯದ ಬಗ್ಗೆ ಜಾಗೃತಿ, ಪ್ರಾಕೃತಿಕ ವಿಪತ್ತುಗಳು ಸಂಭವಿಸುವ ಸಂದರ್ಭದಲ್ಲಿ ಸಲ್ಲಿಸುವ ನಿಸ್ವಾರ್ಥಸೇವೆ ಗಣನೀಯವಾದುದು. ರಾಷ್ಟ್ರಾಭಿವೃದ್ಧಿ ಚಿಂತನೆಯೊಂದಿಗೆ ದೇಶದ ಸತ್ಪ್ರಜೆಗಳಾಗಲು ಇವರು ಇತರರಿಗೆ ಮಾದರಿ ಎಂದರು.

ಪ್ರಾಂಶುಪಾಲರಾದ ಡಾ. ಸಿ.ಎಸ್. ಹೊನ್ನೇಗೌಡ ರವರು ಮಾತನಾಡಿ, ಕಾಲೇಜಿನ ವಿದ್ಯಾರ್ಥಿಗಳು ಸ್ವಯಂಸೇವಕರಾಗಿ ಶಿಸ್ತು, ಸಮಯಪ್ರಜ್ಞೆಯೊಂದಿಗೆ ಗ್ರಾಮದ ಎಲ್ಲಾ ಹಿರಿಯ ಕಿರಿಯ ನಾಗರಿಕರೊಂದಿಗೆ ಬೆರೆಯಬೇಕು. ಗ್ರಾಮದ ನೈರ್ಮಲ್ಯ, ಆರೋಗ್ಯದ ಬಗ್ಗೆ ಅರಿವು ಹಾಗೂ ಶಿಕ್ಷಣದ ಮಹತ್ವ ಕುರಿತಂತೆ ರಾಷ್ಟ್ರೀಯ

ಸೇವಾಯೋಜನಾ ಘಟಕದ ಉದ್ದೇಶಿತ ಕಾರ್ಯಯೋಜನೆಗಳನ್ನು ಸಕಾಲದಲ್ಲಿ ಪೂರ್ಣಗೊಳಿಸಬೇಕು. ಗ್ರಾಮದ ಸಮಸ್ತರ ಪ್ರೀತಿ ಹಾಗೂ ಗೌರವಕ್ಕೆ ಪಾತ್ರರಾಗುವುದರ ಜೊತೆಗೆ ಮಾದರಿ ವಿದ್ಯಾರ್ಥಿಗಳಾಗಿ ಕಾಲೇಜಿಗೆ ಕೀರ್ತಿ ಮತ್ತು ಯಶಸ್ಸನ್ನು ತರಬೇಕು. ಈ ಶಿಬಿರಕ್ಕೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕಾರ ಮತ್ತು ಮಾರ್ಗದರ್ಶನ ನೀಡಿರುವ ಸರ್ವರಿಗೂ ಅಭಿಮಾನಪೂರ್ವಕ ಧನ್ಯವಾದಗಳು ಎಂದರು.

ಮುಖಂಡರುಗಳಾದ ಶ್ರೀ ಸಿದ್ದರಾಜು, ಶ್ರೀ ಮಾದೇಗೌಡ, ಶ್ರೀ ಮಂಜು, ಶ್ರೀ ದೊಡ್ಡಯ್ಯ, ಶ್ರೀ ನಂಜುಂಡಸ್ವಾಮಿ ಹಾಗೂ ಕಾಲೇಜಿನ ಅಧ್ಯಾಪಕರಾದ ಡಾ. ಬಿ.ಕೆ. ಕೆಂಡಗಣ್ಣಸ್ವಾಮಿ ಮುಂತಾದವರು ಪಾಲ್ಗೊಂಡಿದ್ದರು. ಸ್ವಯಂಸೇವಕಿಯರಾದ ಕು. ಗೌತಮಿ ಮತ್ತು ತಂಡ ಪ್ರಾರ್ಥಿಸಿದರು, ಶಿಬಿರಾಧಿಕಾರಿ ಶ್ರೀ ಹೆಚ್.ಆರ್. ಗುರು ಸ್ವಾಗತಿಸಿದರು. ಕು. ಸಹನಾ ವಂದಿಸಿದರು ಹಾಗೂ ಸ್ವಯಂಸೇವಕಿ ಕು. ಅನಿತಾ ಕಾರ್ಯಕ್ರಮ ನಿರೂಪಣೆ ಮಾಡಿದರು.


***

ದಿನಾಂಕ 15.3.2026 ರಂದು ನಡೆದ ಸಮಾರೋಪ ಸಮಾರಂಭದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಗಾಂಧಿ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರಾದ ಡಾ. ಉಮೇಶ್ ರವರು ಮಾತನಾಡಿ, ರಾಷ್ಟ್ರೀಯ ಸೇವಾ ಯೋಜನೆ ಮಹಾತ್ಮ ಗಾಂಧಿಯವರ ಸರ್ವೋದಯ ಪರಿಕಲ್ಪನೆಯ ಕನಸಿನ ಯೋಜನೆಯಾಗಿದೆ. ಸ್ವತಂತ್ರ ಭಾರತ ಈ ಯೋಜನೆಯನ್ನು ದೇಶಾದ್ಯಂತ ವಿಸ್ತರಿಸಿ ಯುವಜನತೆಯನ್ನು ಸೇವಾ ಮನೋಭಾವನೆಯೊಂದಿಗೆ, ಸಮುದಾಯ ಸೇವೆಗೆ ಸಜ್ಜುಗೊಳಿಸುತ್ತದೆ. ಅನುಭವ ಆಧಾರಿತ ನಾಯಕತ್ವದ ಗುಣಗಳು ಹಾಗೂ ರಾಷ್ಟ್ರಾಭಿಮಾನದ ಬದ್ಧತೆಯೊಂದಿಗೆ ಸದೃಢ ಹಾಗೂ ಆರೋಗ್ಯವಂತ ದೇಶ ಕಟ್ಟುವಲ್ಲಿ ಯುವಜನತೆ ಪ್ರಮುಖ ಪಾತ್ರವನ್ನು ವಹಿಸಬೇಕು. ಗ್ರಾಮಾಭಿವೃದ್ಧಿ ಹಾಗೂ ರಾಷ್ಟ್ರಾಭಿವೃದ್ಧಿ ಯೋಜನೆಯನ್ನು ಅರಿವು ಮೂಡಿಸುವ ವಿಶೇಷ ಕಾರ್ಯಕ್ರಮಗಳ ಮೂಲಕ ಸಾಕಾರಗೊಳಿಸಬೇಕೆಂದು ತಿಳಿಸಿದರು.

ಸಂಸ್ಕೃತಿ ಚಿಂತಕರಾದ ಶ್ರೀ ಪೃಥ್ವೀರಾಜ್ ಹಾಲಹಳ್ಳಿಯವರು ಯುವಜನತೆಯ ಸಕಾಲಿಕ ಸೇವಾ ಭಾವನೆ, ರಾಷ್ಟ್ರೀಯ ಪ್ರಜ್ಞೆಯಿಂದ ವೈಜ್ಞಾನಿಕ ಯುಗದಲ್ಲಿ ದೇಶ ಅಭಿವೃದ್ಧಿ ಪಥವನ್ನು ಕ್ರಮಿಸುವಂತಾಗಿದೆ ಎಂದು ಹೇಳಿದರು.

ಕಾಲೇಜಿನ ಪ್ರಾಂಶುಪಾಲರಾದ ಡಾ. ಸಿ.ಎಸ್. ಹೊನ್ನೇಗೌಡರವರು ಮಾತನಾಡಿ, ರಾಷ್ಟ್ರೀಯ ಸೇವಾಯೋಜನಾ ಘಟಕದ ಸ್ವಯಂ–ಸೇವಕರು ಏಳು ದಿನಗಳ ಕಾಲ ಶಿಬಿರಾರ್ಥಿಗಳಾಗಿ ಗ್ರಾಮದ ಜನತೆಯೊಂದಿಗೆ ಬೆರೆತು ಕಲಿತ ಹಾಗೂ ಕಲಿಯಬೇಕಾಗಿರುವ ಸಂಗತಿಗಳನ್ನು ಅರಿತುಕೊಂಡಿದ್ದಾರೆ. ಸಮುದಾಯ ಸೇವೆ ಮತ್ತು ರಾಷ್ಟ್ರೀಯ ಭಾವೈಕ್ಯತೆ ಧ್ಯೇಯದೊಂದಿಗೆ ಶಿಕ್ಷಣ ನೀಡುತ್ತಿರುವ ಪ್ರತಿಷ್ಠಿತ ಕಾಲೇಜಿಗೆ, ಗ್ರಾಮದ ನಾಗರಿಕರಿಗೆ ಹಾಗೂ ದೇಶಕ್ಕೆ ಕೀರ್ತಿ ಮತ್ತು ಯಶಸ್ಸಿನೊಂದಿಗೆ ಮಾದರಿ ವಿದ್ಯಾರ್ಥಿಗಳಾಗಿ ಎಂದರು. ಶಿಬಿರಾಧಿಕಾರಿಗಳಾದ ಶ್ರೀ ಹೆಚ್.ಆರ್. ಗುರು, ಸಹ ಶಿಬಿರಾಧಿಕಾರಿಗಳಾದ ಶ್ರೀ ಸುನಿಲ್‌ಕುಮಾರ್, ಶ್ರೀ ಪ್ರವೀಣ್‌ಕುಮಾರ್, ಅಧ್ಯಾಪಕ ಹಾಗೂ ಅಧ್ಯಾಪಕೇತರ ಬಂಧುಗಳು ಗ್ರಾಮದ ಸಮುದಾಯದ ಮುಖಂಡರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

## ಔಷಧಗಳನ್ನೇ ಆಹಾರವನ್ನಾಗಿ ಸೇವಿಸಬೇಕಾದ ದುಸ್ಥಿತಿ ಒದಗಿದೆ



ಸರಗೂರು ತಾಲ್ಲೂಕು ಬಿ. ಮಟಕೆರೆಯಲ್ಲಿ ಜಿಲ್ಲಾ ವೀರಶೈವ ಲಿಂಗಾಯತ ನೌಕರರ ಸಂಘ, ಜೆಎಸ್‌ಎಸ್ ಆಸ್ಪತ್ರೆ ಮತ್ತು ರೋಟರಿ ಸಂಸ್ಥೆಗಳ ಸಹಯೋಗದಲ್ಲಿ ಆಯೋಜಿಸಿದ್ದ ಬೃಹತ್ ಆರೋಗ್ಯ ಉಚಿತ ತಪಾಸಣೆ ಶಿಬಿರಕ್ಕೆ ಚಾಲನೆ ನೀಡಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿಗಳಾದ ಪ್ರೊ. ಎಸ್.ಪಿ. ಮಂಜುನಾಥ್‌ರವರು ಮಾತನಾಡುತ್ತಿರುವುದು. (21 ಮಾರ್ಚ್ 2026)

ಇಂದು ಚಿಕ್ಕ ವಯಸ್ಸಿನಲ್ಲಿಯೇ ಕಾಯಿಲೆಗಳು ಬರುತ್ತಿದ್ದು, ಔಷಧಗಳನ್ನು ಆಹಾರವಾಗಿ ಸೇವಿಸಬೇಕಾದ ಪರಿಸ್ಥಿತಿ ಬಂದಿದೆ ಎಂದು ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿಗಳಾದ ಪ್ರೊ. ಎಸ್.ಪಿ. ಮಂಜುನಾಥ್‌ರವರು ಹೇಳಿದರು.

**ಸರಗೂರು ತಾಲ್ಲೂಕು ಬಿ. ಮಟಕೆರೆಯಲ್ಲಿ ಜಿಲ್ಲಾ ವೀರಶೈವ ಲಿಂಗಾಯತ ನೌಕರರ ಸಂಘ, ಜೆಎಸ್‌ಎಸ್ ಆಸ್ಪತ್ರೆ ಮತ್ತು ರೋಟರಿ ಸಂಸ್ಥೆಗಳ ಸಹಯೋಗದಲ್ಲಿ** ದಿನಾಂಕ 21.3.2026ರಂದು ಆಯೋಜಿಸಿದ್ದ ಬೃಹತ್ ಆರೋಗ್ಯ ಉಚಿತ ತಪಾಸಣೆ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡುತ್ತಾ ಅವರು ತಿಳಿಸಿದರು. ಸಂಘಟನೆಗಳ ಸ್ಥಾನಮಾನಗಳು ವೈಯಕ್ತಿಕ ಬೆಳವಣಿಗೆಗೆ ಸೀಮಿತವಾಗದೆ ಇಂತಹ ಉಪಯುಕ್ತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಆರ್ಥಿಕ ದುರ್ಬಲ ಮತ್ತು ಗ್ರಾಮೀಣ ಸಮುದಾಯಕ್ಕೆ ನೆರವಾಗಬೇಕು. ವಿಜ್ಞಾನ ಮತ್ತು ತಂತ್ರಜ್ಞಾನದ ತೀವ್ರ ಬೆಳವಣಿಗೆ ಹಾಗೂ ಸಂಶೋಧನೆಗಳಿಂದ ಆರೋಗ್ಯ ಕ್ಷೇತ್ರದಲ್ಲಿ ಸಾಕಷ್ಟು ಸುಧಾರಣೆಗಳು ಆಗಿದ್ದು, ಮನುಕುಲವನ್ನು ರಾಕ್ಷಸಿಯಂತೆ ಕಾಡುತ್ತಿದ್ದ ಅನೇಕ ರೋಗಗಳಿಗೆ ಔಷಧ ಕಂಡು ಹಿಡಿಯಲಾಗಿದೆ. ಮನುಷ್ಯ ಸರಾಸರಿ 100 ವರ್ಷಗಳು ಬದುಕಬಹುದು. ಆದ್ದರಿಂದ ನಿರ್ಲಕ್ಷ್ಯ ತೋರದೆ 40 ವರ್ಷ ತುಂಬಿದ ಪ್ರತಿಯೊಬ್ಬರು ಎಷ್ಟೇ ಆರೋಗ್ಯವಾಗಿದ್ದರೂ ನಿಯಮಿತವಾಗಿ ಆರೋಗ್ಯ ಪರೀಕ್ಷೆ ಮಾಡಿಸಿಕೊಂಡು ವ್ಯತ್ಯಾಸ ಕಂಡುಬಂದರೆ ವೈದ್ಯರ ಸಲಹೆಯಂತೆ ಔಷಧಿ ತೆಗೆದುಕೊಳ್ಳಬೇಕು. ಜೀವನ ಶೈಲಿಯನ್ನು ಬದಲಾಯಿಸಿಕೊಂಡರೆ ಉತ್ತಮ ಬದುಕು

ಸಾಗಿಸಬಹುದು. ಇಂದಿನ ಜೀವನ ಶೈಲಿಯಲ್ಲಿ ಒತ್ತಡದ ಜೀವನ ಕ್ರಮ, ಬದಲಾಗಿರುವ ಆಹಾರ ಪದ್ಧತಿಯಿಂದ ವಯೋಸಹಜ ಕಾಯಿಲೆಗಳು ಚಿಕ್ಕ ವಯಸ್ಸಿನಲ್ಲಿಯೇ ಬರುತ್ತಿವೆ. ಈ ಹಿನ್ನೆಲೆಯಲ್ಲಿ ಗ್ರಾಮೀಣ ಪ್ರದೇಶದ ಜನರಿಗೆ ಇಂತಹ ಶಿಬಿರ ಏರ್ಪಡಿಸಿ ಆರೋಗ್ಯದ ಬಗ್ಗೆ ಅರಿವು ಮೂಡಿಸುತ್ತಿರುವುದು ಶ್ಲಾಘನೀಯ ಕಾರ್ಯ ಎಂದು ಹೇಳಿದರು.

ದಡದಹಳ್ಳಿ ಶ್ರೀ ಗುರುಮಲ್ಲೇಶ್ವರ ಶಾಖಾಮಠದ ಶ್ರೀಗಳು ಮಾತನಾಡಿ, ಸುತ್ತೂರು ಶ್ರೀಮಠಕ್ಕೂ ನಮ್ಮ ತಾಲ್ಲೂಕಿಗೂ ವಿಶೇಷ ಸಂಬಂಧವಿದೆ. ಶ್ರೀಮಠ ಹಲವಾರು ಸಮಾಜ ಸೇವಾ ಕಾರ್ಯಗಳನ್ನು ಮಾಡಿಕೊಂಡು ಬರುತ್ತಿದೆ ಎಂದರು.

ಹಂಚೀಪುರ ಶ್ರೀ ಗುರುಮಲ್ಲೇಶ್ವರ ಶಾಖಾಮಠದ ಕಿರಿಯ ಶ್ರೀಗಳು, ತಾಲ್ಲೂಕು ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷರಾದ ಶ್ರೀ ದಡದಹಳ್ಳಿ ನಟರಾಜು, ಶ್ರೀ ಕಲ್ಮಳ್ಳಿ ನಟರಾಜು, ಶ್ರೀ ಅಣ್ಣಯ್ಯ ಸ್ವಾಮಿ, ಶ್ರೀ ಪರಮೇಶ್ ಮಾಸ್ಟರ್, ಶ್ರೀ ಬಿ.ಆರ್. ಶಿವಕುಮಾರ್, ಶ್ರೀ ಬಾಗಳಿ ಮಹೇಶ್, ಶ್ರೀಮತಿ ಮೀನಾಕ್ಷಿ ಬಸವಣ್ಣ, ಶ್ರೀ ಸಂತೋಷ ಗಜೇಂದ್ರ, ಶ್ರೀ ಪುಟ್ಟಸುಬ್ಬಣ್ಣ, ಶ್ರೀ ಮಾಲಂಗಿ ಸುರೇಶ್, ಶ್ರೀ ಡಿ.ಬಿ. ರಾಜಶೇಖರ್ ಮೊದಲಾದವರು ಉಪಸ್ಥಿತರಿದ್ದರು.

## ಬಸವಾದಿ ಶರಣರ ಕಾಯಕ ತತ್ವ ಎಂದೆಂದಿಗೂ ಪ್ರಸ್ತುತ

**ಜೆಎಸ್‌ಎಸ್ ಮಹಾವಿದ್ಯಾಪೀಠ, ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ** ಹಾಗೂ ಪೂರ್ವ ವಲಯದ ಮೈಸೂರು ಬಸವ ಬಳಗ ಟ್ರಸ್ಟ್ ವತಿಯಿಂದ 335ನೇ ಶಿವಾನುಭವ ದಾಸೋಹ ಕಾರ್ಯಕ್ರಮವನ್ನು ಪ್ರೀಮಿಯೋ (ರೆಡ್ಡಿ) ಬಡಾವಣೆಯಲ್ಲಿ ಆಯೋಜಿಸಲಾಗಿತ್ತು. ಸಾಹಿತಿಗಳಾದ ಶ್ರೀ ನಗರ್ಲೆ ಶಿವಕುಮಾರ ಅವರು 'ವರ್ತಮಾನಕ್ಕೆ ಶರಣರ ಕಾಯಕತತ್ವ' ಎಂಬ ವಿಷಯ ಕುರಿತು ಉಪನ್ಯಾಸ ನೀಡಿದರು.

ನಾವೆಲ್ಲರೂ ನಮ್ಮ ಜೀವಿತಾವಧಿಯಲ್ಲಿ ಭೂತಕಾಲ, ವರ್ತಮಾನ ಕಾಲ, ಭವಿಷ್ಯತ್‌ಕಾಲವನ್ನು ನೋಡುತ್ತೇವೆ. ಹನ್ನೆರಡನೆಯ ಶತಮಾನದ ಬಸವಾದಿ ಶರಣರ ಕಾಯಕ ಮತ್ತು ದಾಸೋಹ ತತ್ತ್ವಗಳು ಜಗತ್ತು ಇರುವವರೆಗೂ ಇರುತ್ತವೆ. ಒಂಬೈನೂರು ವರುಷಗಳು ಕಳೆದರೂ ಶರಣರ ತತ್ತ್ವಗಳು ಭೂತಕಾಲವೆನಿಸುವುದಿಲ್ಲ. ವರ್ತಮಾನದ ಜೊತೆಗೆ ಭವಿಷ್ಯತ್ ಕಾಲಕ್ಕೂ ಅವು ಸಲ್ಲುವಂಥವು. ಬಸವಣ್ಣನವರು ಅನುಭವ ಮಂಟಪ ಮತ್ತು ಶಿವಾನುಭವ ದಾಸೋಹಗಳ ಮೂಲಕ ಎಲ್ಲ ಕಾಯಕ ಬಂಧುಗಳನ್ನೂ ಒಟ್ಟುಗೂಡಿಸಿ ಅವರಿಗೆಲ್ಲ ಲಿಂಗದೀಕ್ಷೆ ನೀಡಿ, ಸತ್ಯ ಶುದ್ಧ ಕಾಯಕವನ್ನು ಮಾಡುವಂತೆ ಪ್ರೇರೇಪಿಸಿದರು. ಬಹುರೂಪಿ ಚೌಡಯ್ಯನವರು ಗಾಯನ, ನರ್ತನ ಮತ್ತು ಜನಪದ ಕಲಾವಿದರಾಗಿದ್ದರು. ಕಿನ್ನರಿ ಬ್ರಹ್ಮಯ್ಯನವರು ಕಿನ್ನರಿಯೆಂಬ ತಂತೀವಾದ್ಯವನ್ನು ನುಡಿಸುತ್ತಿದ್ದರು. ಮಡಿವಾಳ ಮಾಚಯ್ಯನವರು ಶರಣರ ಬಟ್ಟೆಗಳನ್ನು ಒಗೆಯುವ ಕಾಯಕ ಮಾಡುತ್ತಿದ್ದರು. ಘಟ್ಟಿವಾಳಯ್ಯನವರು ದಾಸೋಹನಿಲಯದ ದ್ವಾರಪಾಲಕರಾಗಿದ್ದರು. ನುಲಿಯ ಚಂದಯ್ಯನವರು ಹಗ್ಗ ಹೊಸೆಯುತ್ತಿದ್ದರು. ಹೀಗೆ ಶರಣರು ವಿವಿಧ ಕಾಯಕಗಳಲ್ಲಿ ನಿರತರಾಗಿದ್ದರು. ಸಮಾಜದಲ್ಲಿರುವ ಪ್ರತಿಯೊಬ್ಬರೂ ಕಾಯಕ ಮಾಡಲೇಬೇಕು, ಮೇಲು–




ಕೀಳು ಎನ್ನದೇ ದುಡಿದು ತಿನ್ನಬೇಕೆಂಬುದು ಬಸವಾದಿ ಶರಣರ ಅಭಿಮತವಾಗಿತ್ತು. ಅನುಭವ ಮಂಟಪದಲ್ಲಿ ಮಹಿಳೆಯರಿಗೆ ಅಭಿಪ್ರಾಯ ಸ್ವಾತಂತ್ರ್ಯ ನೀಡಿದ್ದರಿಂದ, ತೊಟ್ಟಿಲನ್ನು ತೂಗುವ ಕೈ ಜಗತ್ತನ್ನೇ ತೂಗಬಲ್ಲದು ಎಂಬ ಸತ್ಯ ವಿಶ್ವದ ಇತಿಹಾಸದಲ್ಲಿ ದಾಖಲಾಯಿತು. ಶರಣೆಯರು ಸಹ ಸಾಹಿತ್ಯವನ್ನು ರಚಿಸಿದರು; ನುಡಿದಂತೆ ನಡೆದು ತೋರಿಸಿದರು. ವರ್ತಮಾನಕ್ಕೆ ಶರಣರ ಕಾಯಕ ತತ್ತ್ವವನ್ನು ಅಳವಡಿಸಿದರೆ ಹಿಂಸೆಯನ್ನು ತೊಲಗಿಸಿ, ತಾಳ್ಮೆ, ಸಹನೆ, ವಿಶ್ವಾಸಗಳಿಂದ ಬದುಕಬಹುದು ಎಂದು ಹೇಳಿದರು.

ವಿಶ್ರಾಂತ ಪ್ರಾಧ್ಯಾಪಕರಾದ ಡಾ. ಸಿ.ಜಿ. ಉಷಾದೇವಿಯವರು ಅಧ್ಯಕ್ಷ ಭಾಷಣ ಮಾಡಿದರು. ಶ್ರೀ ಶಿವರಾತ್ರೀಶ್ವರ ಭಜನಾ ತಂಡ ಮತ್ತು ಶ್ರೀ ಲಲಿತಾದ್ರಿ ಮಹಿಳಾ ವೇದಿಕೆಯವರು ಭಜನೆಯನ್ನು ನಡೆಸಿಕೊಟ್ಟರು. ಶ್ರೀ ಎಂ. ಸ್ವಾಮಿಯವರು ಸ್ವಾಗತಿಸಿದರು. ಶ್ರೀ ಎಂ. ಮಹದೇವಪ್ರಸಾದ್‌ರವರು ನಿರೂಪಣೆ ಮತ್ತು ವಂದನಾರ್ಪಣೆ ಮಾಡಿದರು. ಶ್ರೀಮತಿ ಕೆ.ಎನ್. ನಾಗಲಾಂಬಿಕಾ ಮತ್ತು ಶ್ರೀ ಎಂ. ಸ್ವಾಮಿಯವರು ಸಮಾರಂಭದ ಪ್ರಾಯೋಜಕತ್ವವನ್ನು ವಹಿಸಿಕೊಂಡಿದ್ದರು. ಮೈಸೂರು ಬಸವ ಬಳಗ ಟ್ರಸ್ಟ್‌ನ ಪದಾಧಿಕಾರಿಗಳು, ಹಾಗೂ ಇತರ ಸಮಾನಮನಸ್ಕ ಬಳಗಗಳ ಅಧ್ಯಕ್ಷರುಗಳು ಸೇರಿದಂತೆ ವಿವಿಧ ಬಡಾವಣೆಗಳ ಶರಣ ಬಂಧುಗಳು ಸಮಾರಂಭದಲ್ಲಿ ಹಾಜರಿದ್ದರು.

ಕೃತಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬಡಿದು
ಬುದ್ಧಿಯ ಕಲಿಸಿದಡೆ ಆಗಲಿ ಮಹಾಪ್ರಸಾದವೆಂದೆನಯ್ಯಾ
ತ್ರೇತಾಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬೈದು
ಬುದ್ಧಿಯ ಕಲಿಸಿದಡೆ ಆಗಲಿ ಮಹಾಪ್ರಸಾದವೆಂದೆನಯ್ಯಾ.
ದ್ವಾಪರದಲ್ಲಿ ಶ್ರೀಗುರು ಶಿಷ್ಯಂಗೆ ಝುಂಕಿಸಿ
ಬುದ್ಧಿಯ ಕಲಿಸಿದಡೆ ಆಗಲಿ ಮಹಾಪ್ರಸಾದವೆಂದೆನಯ್ಯಾ.
ಕಲಿಯುಗದಲ್ಲಿ ಶ್ರೀಗುರು ಶಿಷ್ಯಂಗೆ ವಂದಿಸಿ
ಬುದ್ಧಿಯ ಕಲಿಸಿದಡೆ ಆಗಲಿ ಮಹಾಪ್ರಸಾದವೆಂದೆನಯ್ಯಾ
ಗುಹೇಶ್ವರಾ ನಿಮ್ಮ ಕಾಲದ ಕಟ್ಟಳೆಯ ಕಲಿತನಕ್ಕೆ ನಾನು ಬೆರಗಾದೆನು

**ಶ್ರೀ ಅಲ್ಲಮಪ್ರಭು ದೇವರು**

## ದೈಹಿಕ ಕ್ಷಮತೆ ಮತ್ತು ಮನೋಬಲದ ಮೂಲಕ ಮಹಿಳೆಯರ ಸಬಲೀಕರಣ



**ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ** ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ದೈಹಿಕ ಶಿಕ್ಷಣ ವಿಭಾಗದಿಂದ 18 ಮತ್ತು 23 ಮಾರ್ಚ್ 2026ರಂದು ವಿವಿಧ ಕ್ರೀಡಾಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ಜೆಎಸ್‌ಎಸ್ ಮಹಿಳಾ ವಸತಿನಿಲಯದ ಮುಖ್ಯ ನಿಲಯಪಾಲಕರಾದ ಶ್ರೀಮತಿ ಮಮತಾ ಸುರೇಶ್‌ರವರು ಉದ್ಘಾಟಿಸಿ ಮಾತನಾಡುತ್ತಾ, ಸಿಬ್ಬಂದಿಗಳಲ್ಲಿ ದೈಹಿಕ ಕ್ಷಮತೆ ಮತ್ತು ಮನೋಬಲ ಬೆಳೆಸುವ ಉದ್ದೇಶದಿಂದ ಆಯೋಜಿಸಲಾದ ಈ ಕಾರ್ಯಕ್ರಮ ಪ್ರಶಂಸನೀಯವಾದದ್ದು. ಇಂತಹ ಸ್ಪರ್ಧೆಗಳು ಮಹಿಳೆಯ ಸಬಲೀಕರಣಕ್ಕೆ ಪ್ರೋತ್ಸಾಹ ನೀಡುತ್ತದೆ ಎಂದು ಅಭಿಪ್ರಾಯಪಟ್ಟರು.

ಮ್ಯೂಸಿಕಲ್ ಚೇರ್, ಲೆಮನ್ ಅಂಡ್ ಸ್ಪೂನ್ ರೇಸ್, ಹಗ್ಗಜಗ್ಗಾಟ, ಬ್ರೇಕಿಂಗ್ ಪಾಟ್, ಚೌಕಾಬಾರಾ ಮತ್ತು ಟೆನ್ನಿಕಾಯ್ಟ್ ಸ್ಪರ್ಧೆಗಳನ್ನು ನಡೆಸಲಾಯಿತು. ಸ್ಪರ್ಧೆಗಳಲ್ಲಿ ಬೋಧಕ ಹಾಗೂ ಬೋಧಕೇತರ ಮಹಿಳಾ ಸಿಬ್ಬಂದಿವರ್ಗದವರು ಸಕ್ರಿಯವಾಗಿ ಭಾಗವಹಿಸಿದ್ದರು.



# JSS Medical College Strengthens Research Ecosystem




**JSS Medical College, Mysuru** conducted a one-day workshop on "Effective Research Grant Proposal Development & Quality Enhancement" on 2.3.2026. The programme was jointly organised by the Internal Quality Assurance Cell of the College and the Department of Community Medicine, as part of the university's continued commitment to advancing research excellence.

The workshop aimed to enhance the capacity of faculty members to develop high-quality, competitive research proposals aligned with national and international funding priorities. Faculty from the Medical, Dental, Pharmacy, and School of Life Sciences actively participated in the programme.

The workshop was inaugurated by Dr. H. Basavanagowdappa, Vice-Chancellor, JSS AHER, who emphasized that competitive research funding reflects institutional credibility, scientific rigor, and societal relevance. He encouraged the faculty members to adopt strategic, collaborative and impact-driven research approaches.

Dr. D. Narayanappa, Principal of the College, motivated the participants to actively pursue competitive funding opportunities and strengthen inter-disciplinary collaborations. The inaugural session was graced by Dr. K. Pushpalatha, Dean IQAC, and Dr. B. Madhu, Head, Department of Community Medicine.

A key highlight of the programme was an interactive panel discussion on "Common Reasons for Grant Rejection and Tips for Success," moderated by Dr. Nayana Shabadi. The panel emphasized clarity, feasibility, methodological strength, and alignment with funding priorities as essential determinants of success.

Dr. H. Basavana Gowdappa, in his speech, remarked, "Strong ideas deserve strong preparation. When we combine clarity, collaboration, and commitment, funding success naturally follows".

The workshop concluded with a call to translate learning into action by submitting high-quality proposals in upcoming funding cycles, reinforcing the College's vision of building a sustained and impactful research ecosystem.



## National Pharmacy Education Day and Annual Day Celebrations Held



**JSS College of Pharmacy, Mysuru** organised the National Pharmacy Education Day and Annual Day celebration on 6.3.2026. The first event was a grand tribute to the relentless contributions of students, faculty, and staff, celebrating their achievements and inspiring future pharmacists. The occasion also marked the 123rd Birth Anniversary of Prof. Mahadeva Lal Schroff, fondly known as the Father of Pharmacy in India. The Pharmacy Council of India has declared 6th March as the National Pharmacy Education Day. The theme for Pharma Anveshan this year was, "Future Pharma Ecosystem: Fostering Synergy among Academia, Industry, Research, Regulatory and Practice".

The event commenced with a welcome address by Sri I.A. Chethan, Asst. Professor, JSS College of Pharmacy, who also paid homage to Prof. M. L. Schroff, acknowledging his profound impact on pharmacy education and practice in India. Dr. B. Manjunatha, Registrar, JSS AHER addressed the gathering and motivated the students. He spoke about the latest advancements in pharma education and the positive impact of AI. Prof. D.

Sundar, Director and Biocon Chair, Institute of Bioinformatics and Applied Biotechnology, Bengaluru was the Chief Guest. Dr. Amol A. Raje, Director-DMPK, Biology, Syngene International Limited, Bengaluru was the Guest of Honour, adding prestige to the event.

The event commenced with lighting of the lamp. Dr. T.M. Pramod Kumar, Principal, JSS College of Pharmacy, presented the Annual Report, showcasing the institution's progress, innovations, and achievements during the previous year.

The Chief Guest, Prof. D. Sundar, delivered an insightful address, acknowledging JSS College of Pharmacy, for its significant role in advancing pharmacy education in India. He also shed light on the pharmaceutical industry's growing influence in healthcare and the economy, inspiring the students to contribute meaningfully to the field. The Guest of Honour, Dr. Amol A. Raje, also appreciated JSS College of Pharmacy for its remarkable contributions and encouraged students to pursue research-driven and patient-centric studies.

A highlight of the event was the felicitation ceremony, recognizing the exceptional talents among students and faculty. Faculty Awards were conferred upon distinguished teachers for their contributions to teaching, research, and institutional development. Faculty members who featured in Stanford University's List of the World's Top 2% Scientists were also felicitated. The Best Outgoing Students of various programmes were honoured for their academic and extracurricular excellence. Winners of sports competitions were acknowledged, with the Overall Championship Trophy being awarded to the most outstanding team. Students from different courses were recognized with Certificates of Merit for their outstanding academic achievements during the year 2024-25. The Institutional Pharmaceutical Society (IPS) members for 2025-26 were honoured for their contributions, marking their commitment to fostering professional growth in pharmacy.

The event concluded with vote of thanks by Dr. K.M. Asha Spandana, Asst. Professor, JSS College of Pharmacy, and finally by singing the National Anthem.

## Women's Day Celebrated




International Women's Day was held at **JSS Public School, JSS TIS' Campus, Mysuru** on 8.3.2026, in the presence of the Principal, teachers and parents.

The programme commenced with welcome by the anchors, followed by lighting of the ceremonial lamp. The Principal addressed the gathering and spoke about the importance of recognizing the strength, courage and achievements of women in every walk of life.

Several activities were conducted to mark the occasion. A creative Rangoli competition and a lively "Pick and speak" programme made the participants to share their creatively on women's empowerment and the role of women in modern society.

Prizes and certificates were distributed to the winners, in recognition of their outstanding performances. The programme concluded with a vote of thanks.

## MoU Signed with Merck (India)




A significant milestone for **JSS College of Pharmacy, Mysuru,** was the signing of a Memorandum of Understanding with Merck (India) on 25.2.2026. The leadership from Merck interacted with the leaders from JSS AHER and discussed about various avenues of collaboration.

This MoU strengthens the commitment of the college to a meaningful industry-academia collaboration, with a focused agenda on structured skill development, research alignment, internships, and enhanced career pathways for the students.

Merck also launched Catalyst 2.0 on this occasion, an industry-oriented programme designed to strengthen competencies in Medical Writing, Regulatory Affairs, Soft Skills, and Allied Healthcare Research Domains. The initiative aimed to bridge academic learning with real-world industry expectations through expert engagement, structured mentoring and applied exposure.

This partnership reinforces to develop globally competent, industry-ready healthcare professionals and to contribute meaningfully to the evolving healthcare ecosystem. During the visit, representatives from Merck India also went around the JSS Hospital to explore opportunities for strengthening clinical research initiatives and collaborative healthcare studies.

## Inauguration of IEEE Computer Society Student Chapter



The IEEE Computer Society Student Chapter was inaugurated at **Sri Jayachamarajendra College of Engineering, Mysuru** on 7.3.2026. The programme began with a "Walk with an IEEE Fellow" at Kukkarahalli Lake, where the students interacted with Dr. K.R. Venugopal, Former Vice-Chancellor of Bangalore University.

The inauguration of the Student Chapter was later held at the JSS STU campus by Prof. K.R. Venugopal in the presence of several dignitaries. The programme was presided over by Dr. Mallu, Vice-Principal, SJCE.

Addressing the gathering, Prof. Venugopal opined that India should introduce a policy to award Ph.D. degrees to individuals who develop innovative and impactful products, emphasizing the need for research that leads to practical technological solutions benefiting society and industry.

During the event, Dr. B.T. Prasanna was nominated as the Faculty Advisor of the IEEE Chapter. The nominated student officers of the IEEE CS SJCE Chapter were Sri Ashish Joseph as Chair, Ms. Jyothishree as Vice-Chair, and Sri Mohammad Mansoor as Technical Co-ordinator.

Among those present were Dr. Pramodh (IEEE Staff), Prof. Veena, Prof. B.T. Prasanna (IEEE-SJCE Student

Chapter Advisor), Dr. Dilip Kumar Dalei, IEEE Chair, Bangalore Section and Scientist, DRDO, Prof. K.M. Anil Kumar, Head, Department of Computer Science and Engineering, Dr. Anindya Saha, VP, Tejas Networks, Prof. Deepa Shenoy and Prof. Sudarshan Patil Kulkarni.

As part of the International Women's Day 2026 celebrations, a special talk was delivered at JSS STU by Smt. Pushpa S. Murthy, Chief Scientist, CFTRI, on "Women Pioneering Innovation : Insights from R&D and Technology Transfer in India". The event witnessed enthusiastic participation from all faculty members, IEEE members, and students.

The programme was co-ordinated by Dr. B.T. Prasanna, Smt. R. Rakshitha, Smt. G.C. Shwethashree and Dr. H.D. Nandeesh, Department of CS&E, SJCE, JSS STU.

## Award Winners in Sports



Students of **JSS Medical College, Mysuru,** participated in the Sports Tournament organised jointly by NITTE University, Mangaluru; Sri Devaraja Urs University, Kolar; JIMPER, Pondicherry; MIMS and MMCRI. They won many awards under various different individual and group games, i.e., Chess, Swimming, Table Tennis, Tennis, Athletics, Football and Badminton. They were seen along with the winning trophies, with Dr. Payal, Dr. Sachin P. Shetty, Chairperson of Sports Committee, Sri S.R. Sathish Chandra, Administrative Officer of JSS MC, Sri Lokeshappa, Director of Physical Education, Dr. Aarush and Dr. Om Priyadarshini.

## National Conference Held



A National Conference on "Evidence to Excellence : Integrating Research and Leadership Across the Learning and Practice Continuum", was held at **JSS College of Nursing, Mysuru** on 6th & 7th March, 2026.

The conference was inaugurated by Dr. C.G. Betsurmath, Executive Secretary, JSS Mahavidyapeetha. Keynote Address was delivered by Dr. Sharada Ramesh, Director of Academics, Hxplain A Digital Health Solutions Pvt. Ltd., Chennai.

Dr. H. Basavana Gowdappa, Vice-Chancellor, JSS Academy of Higher Education and Research was the Chief Guest. The presidential address was delivered by Sri R. Mahesh, Director, Medical Education Division, JSS Mahavidyapeetha. Prof. Preethi Nagur, a KSNC Observer, announced 8 KSNC Credit Points for the conference.

The Conference ended with a valedictory session, wherein Dr. Chanchal Goyal, Dr. Jyoti Sarin, Dr. Vaishali Rajsinha Mohite and Prof. Preethi Nagur, Principal, Sai Sidd College of Nursing, Mysuru (KSNC Observer) and Prof. M.K. Aswathy Devi, Principal, JSS College of Nursing, Mysuru were present. The Heads of Organizing committees and faculty members from various institutions, and 300 delegates were present at the event.

## National Integration Camp Held



Dept. of Youth Empowerment & Sports and **JSS Academy of Higher Education & Research, Mysuru**, jointly organized the NSS National Integration Camp 4.0 under the theme "Ek Bharat, Shreshtha Bharat : Youth as Catalysts of National Integration" from 12th -18th March 2026.

The inaugural ceremony was held on 12.3.2026. The chief guest at the event was Sri Anke Gowda, a Padmashree Awardee, and owner of Pustakada Mane and also a noted social worker from Mandya. Other dignitaries present included Dr. H. Basavangowdappa, Vice-Chancellor, JSS AHER; Dr. T.M. Pramod Kumar, Dean and Principal of JSS College of Pharmacy; and Dr. K.L. Krishna, NSS Programme Co-ordinator.

In his address, Sri Anke Gowda encouraged the students to commit themselves to education, discipline and social service. Other guests and organizers also emphasized the significance of national harmony, leadership development, and cultural exchange among the youth.

About 150 NSS Volunteers and Programme Officers from six states participated in the camp, which provided a platform for cultural interaction and mutual learning. Various activities, including cultural performances and discussions were organized to promote national unity and youth empowerment.

## International Women's Day Celebrated



The International Women's Day was celebrated at **JSS Academy of Technical Education, Bengaluru** on 13.3.2026. The programme was organized for the women staff and girl students of the institution by the College Internal Complaints Committee. The event celebrated the spirit of women's empowerment under the theme "Give to Gain - Rights, Justice, Action for All Women and Girls", emphasizing the importance of bridging legal gaps and accelerating gender equality.

The programme was inaugurated by the Chief Guest, Smt. K.R. Nandini, CEO, Zilla Panchayat, Mandya, in the presence of the Guest of Honour, Smt. Deepa Ravishankar, Actress and Writer. The function was presided over by Dr. P.M. Rekha, Dean-Academics. Others on the dais were Dr. N. Poornima, Chairperson - CICC, Sri C.S. Veeresh, Administrative Officer, and the women fraternity of JSS ATEB.

The event commenced with an invocation by Ms. Madhura Padaki (6th Semester, ISE). The ceremonial lighting of the lamp was done marking the auspicious beginning of the programme. Dr. N. Poornima,

Chairperson-CICC, delivered the welcome address. Dr. Basamma Umesh Patil, Convener - CICC, presented the Annual Report of the Committee, highlighting the various initiatives taken up during the past year to promote awareness, safety, and empowerment among women. The Chief Guest was introduced by Smt. N. Snehalatha, Assistant Professor, Department of CSE, and the Guest of Honour was introduced by Smt. T.S. Kruthi, Member-CICC. The dignitaries were felicitated by Dr. P.M. Rekha and Sri C. Veeresh respectively.

In her address, Smt. K.R. Nandini emphasized that respect for women is the collective responsibility and highlighted that women have made significant contributions in every field. She noted that women have consistently demonstrated their strength and capability by excelling in all areas such as sports, administration, science, and other professional domains. The Guest of Honour, Smt. Deepa Ravishankar spoke about the important role women have played in the progress of society. She mentioned that behind the success of many individuals, there is often the support, strength, and sacrifice of women. She encouraged the women to contribute to social development by actively engaging in community service and supporting the upliftment of the poor and underprivileged

As part of the celebration, a felicitation ceremony was organized to honour women Ph.D. holders and VTU rank holders of the institution.

Sri C.S. Veeresh, Administrative Officer and Member-CICC, appreciated the multifaceted role of women and their strength and resilience. Dr. P.M. Rekha, Dean-Academics, highlighted women's contributions in research, innovation and leadership, reaffirming the institution's commitment to equality and empowerment. The programme featured vibrant cultural performances like "Naari Shakthi" (Dance) and "Swaragam" (Music). The event ended with Vote of Thanks by Dr. B.N. Supriya.

## JSS AHER in Top 100 Rankings

**JSS Academy of Higher Education & Research, Mysuru,** achieved a significant global milestone in the QS World University Rankings by Subject (2026), further strengthening its position as a leading institution in health sciences education and research. JSS AHER has been ranked 91st globally under of "Pharmacy & Pharmacology" category, marking its entry into the Elite Top 100 institutions in the world for pharmacy education and research.

In addition, under the Subject Category of Medicine, JSS AHER has demonstrated notable progress by advancing to the 551-600 rank band globally, from the 651-700 band in the previous year, thereby entering the "Top 600" institutions worldwide for medical studies.

H.H. Jagadguru Sri Shivarathri Deshikendra Mahaswamiji, Chancellor of JSS AHER, conveyed his blessings on this achievement and stated that this recognition is a reflection of the institution's unwavering commitment to excellence in teaching, research, and service to society. He emphasized that, guided by the values of selfless service and knowledge dissemination, JSS AHER continues to contribute meaningfully to global health and human well-being.

Dr. B. Suresh, Pro-Chancellor of JSS AHER, noted that entering the Top 100 globally in Pharmacy & Pharmacology is a historic milestone and a testament to the strength of the institution's academic ecosystem, research contributions, and international collaborations. He also noted that the consistent progress in the field of medicine reflects the institution's commitment to aligning with global benchmarks and advancing healthcare education.

Dr. H. Basavanagowdappa, Vice-Chancellor, JSS AHER, stated that this achievement is the result of the collective efforts of faculty, researchers, and students, in building a robust academic and research environment.

## Technical Event "SELENITE" Held



SELENITE, a six-day Technical Event was held from 9th-14th March 2026 at **JSS Academy of Technical Education, Bengaluru.** The function was organized by the Google Developer Group (GDG-JSS ATEB) student community, brought together innovation, collaboration, and experiential learning with an average daily participation of 200 students. The first four days featured engaging activities including Mini Games (aptitude, tech quizzes and problem-solving), a campus-wide cyber security-based Murder Mystery challenge, GDG × SharkTank startup pitching across domains like FinTech, Cybersecurity, and Sustainability, and an Industry Expert Bootcamp with insights on Data Engineering by Sri Prasanna Saraf (Thoughtworks) and Cybersecurity by Sri D.J. Bharadwaj (Synechron Technologies), preparing participants for the flagship ECLIPSE Hackathon. Conducted in collaboration with IIT, Guwahati under the ISEA Project Phase III supported by MeitY, Govt. of India, and sponsored by Allieding Platform, SELENITE stood as an effective platform for student innovation and hands-on learning.

## National Science Week Celebrated



**JSS Academy of Technical Education, Bengaluru**, celebrated National Science Week 2026 from 23rd - 27th March 2026 under the theme "Women in Science : Catalysing Viksit Bharat." The programme was organized by the Department of Chemistry, in association with IQAC for the benefit of first year B.E. students.

A variety of events, including Science Quiz, Essay Writing, Poster Making, Working Models, and Technical Talks, were conducted throughout the week. These activities encouraged scientific curiosity, creativity, and innovation among the students while highlighting the vital role of women in science and nation-building.

The valedictory function, held on 27.3.2026, began with an invocation by Sri Y. Raghav, followed by a welcome address by Dr. B. Roopashree, Head of the Department of Chemistry. Dr. D. Kathyayani, Assistant Professor, presented a brief report of the week's activities and introduced the Chief Guest, Dr. J.N. Balaraju, Former Chief Scientist and Head, Surface Engineering Division, N.A.L., Bengaluru.

Dr. Balaraju delivered an engaging talk on "The Science and Impact of Electroless Nickel Coatings in Aerospace and Beyond," offering valuable insights into advanced surface engineering applications. The programme also included prize distribution to the winners of various competitions.

In his presidential address, Dr. Bhimasen Soragaon, Principal, appreciated the efforts of the organizers and commended the enthusiastic participation of students. The event was co-ordinated by Dr. D. Kathyayani.

## Chief Minister's Award for NCC Excellence



Junior Under Officer Ms. Anju A. Gowda, a III Year Computer Science and Engineering student, SJCE, **JSS Science and Technology University, Mysuru** and a cadet of 1 Karnataka Engineer Company NCC, Mysuru has been awarded the prestigious Chief Minister's Commendation Card and Medal by the Government of Karnataka, in recognition of her exemplary achievements in the National Cadet Corps.

Ms. Anju has demonstrated outstanding discipline, dedication, and commitment through active participation in various NCC activities. She has attended seven camps, and also represented the Mysuru Group firing team at the Inter Group Sports Shooting Competition. She has also participated in the 'Ek Bharat Shreshtha Bharat' Camp held at Toranagallu.



ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಕ್ಯಾತ್‌ಲ್ಯಾಬ್, ಅತ್ಯಾಧುನಿಕ ಎಐ ಆಧಾರಿತ ಸಿಟಿ ಸ್ಕ್ಯಾನರ್, ಉನ್ನತೀಕರಿಸಿದ ಎಂಆರ್‌ಐ, ನರಶಸ್ತ್ರಚಿಕಿತ್ಸಾ ಸೂಕ್ಷ್ಮದರ್ಶಕಯಂತ್ರಗಳ ಚಾಲನೆಯು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿತು. ಡಾ. ಸಿ.ಪಿ. ಮಧು, ಶ್ರೀಮತಿ ನಾಗಲಕ್ಷ್ಮೀ ಚೌಧರಿ, ಶ್ರೀ ಟಿ.ಎಸ್. ಶ್ರೀವತ್ಸ, ಶ್ರೀ ಪಿ.ಎಂ. ನರೇಂದ್ರಸ್ವಾಮಿಯವರುಗಳಿದ್ದಾರೆ. (29 ಮಾರ್ಚ್ 2026)




ಮೈಸೂರಿನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ರಾಜ್ಯ ಮಟ್ಟದ ಕಲಾ ಸಂಭ್ರಮ–2026ರ 'ವರ್ಧಿನಿ' ಕಾರ್ಯಕ್ರಮವನ್ನು ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿಗಳಾದ ಪ್ರೊ. ಎಸ್.ಪಿ. ಮಂಜುನಾಥ್‌ರವರು ಉದ್ಘಾಟಿಸಿದರು. (24 ಮಾರ್ಚ್ 2026)

**Registered with the Registrar of Newspapers for India No. KARBIL/2014/66470**
**'JSS Varthapathra' Monthly, Vol. 11, Issue No. 4, April 2026**



ಮೈಸೂರಿನ ಶ್ರೀ ಸುತ್ತೂರು ಮತಕ್ಕೆ ಕೇಂದ್ರ ಸಚಿವ ಶ್ರೀ ಧರ್ಮೇಂದ್ರ ಪ್ರಧಾನ್‌ರವರು ಭೇಟಿ ನೀಡಿದ ಸಂದರ್ಭದಲ್ಲಿ ಪರಮಪೂಜ್ಯ ಜಗದ್ಗುರುಗಳವರು ಅವರನ್ನು ಸನ್ಮಾನಿಸಿ ಆಶೀರ್ವದಿಸಿದರು. ಚಿತ್ರದಲ್ಲಿ ಡಾ. ಬಿ. ಸುರೇಶ್ ಹಾಗೂ ಡಾ. ಸಿ.ಜಿ. ಬೆಟಸೂರಮಠರವರುಗಳಿದ್ದಾರೆ. (26 ಮಾರ್ಚ್ 2026)

ಸಂಪಾದಕ: **ಡಾ. ಬಿ. ಪ್ರಭುಸ್ವಾಮಿ ಕಟ್ನವಾಡಿ** ನೆರವು: **ಆರ್.ಎಸ್. ಪೂರ್ಣಾನಂದ** ಸಹ ಸಂಪಾದಕ: **ಮ.ಗು. ಬಸವಣ್ಣ**
ಪ್ರಕಾಶಕರು: ಜೆಎಸ್‌ಎಸ್ ಮಹಾವಿದ್ಯಾಪೀಠ, ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು 570 004
ದೂರವಾಣಿ: 0821–2548212 Extn. 223 e-mail: varthapathra@jssonline.org website: www.jssonline.org
ಮುದ್ರಣ: ಜೆಎಸ್‌ಎಸ್ ಪ್ರಿಂಟಿಂಗ್ ಪ್ರೆಸ್, ಮೈಸೂರು
**ಬಿಡಿ ಪ್ರತಿ 10 ರೂ.**